


ಸಂಪುಟ ೮ | ಫೆಬ್ರವರಿ ೧೯೪೮ | ಸಂಚಿಕೆ ೧೧

ಕುಹಕಿಡಿಗಳು

ಮಹಾತ್ಮರು ಉಪವಾಸ ವ್ರತ ಮುಗಿಸಿದ ಕೂಡಲೇ, ನಮ್ಮ ಹೊಟ್ಟೆಗೆ ಹಾಲು ಕರೆದಂದಾಯ್ತು.

* * * *

ಮಹಾತ್ಮರ 'ಕಿವಿ' ಅದೆಷ್ಟು ಚುರುಕಪ್ಪಾ! ನಮ್ಮೂರಿನ ಸಣ್ಣ ಕೋಮುವಾರು ಸರಸ ಕೂಡ ಅವರಿಗೆ ಕೇಳಿಸಿತಲ್ಲಾ!

* * *

ಬಟ್ಟೆ ಕಂಟ್ರೋಲ್ ತೆಗೆದುದರಿಂದ—ಗಾಂಧೀಜೀಗೆ ಎಷ್ಟು ಅನುಕೂಲವೋ—ನಮಗೂ ಅಷ್ಟೆ—ಈಗಿನ ಸಂಬಳದಲ್ಲಿ—

* * *

ಸಂಕ್ರಾಂತಿಗೆ ಸಕ್ಕರೆ ಏನೋ ಸಿಕ್ಕಿತು; ಅಷ್ಟಕ್ಕೆ ಸಕ್ಕರೆ ಕಂಪೆನಿ ಷೇರು ಅಟ್ಟಕ್ಕೆ ಹೋಯ್ತಂತೆ.

* * *

ಭಾಷಾವಾರು ಪ್ರಾಂತ್ಯ ನಿರ್ಮಾಣಕ್ಕೆ ಶ್ರೀ ಜಿನ್ನಾರವರು ಪೂರ್ಣ ಅನುಮೋದನೆ ಕೊಟ್ಟರಂತೆ—

—ಉರ್ದು ಆಡುವ ದೇಶಗಳೆಲ್ಲಾ ಒಂದೇ ಸರಹದ್ದಿನಲ್ಲಿರಬೇಕು, ಅಂತಲೇ?

* * *

ಈ ಸಂಸ್ಥಾನಗಳು ಎಷ್ಟು ಅನ್ಯೋನ್ಯ ಅಂತೀರಿ—

—ಈ ಸಂಸ್ಥಾನದಲ್ಲಿ ಆ ಸಂಸ್ಥಾನದ ಆಜಾದ್ ಸರ್ಕಾರ ಇರುತ್ತೆ.

* * *

ಕಾಂಗ್ರೆಸಿನಿಂದ ಈಗ ಸರ್ಕಾರ ಡೀಕಂಟ್ರೋಲ್ ಆಗಿದೆಯೆಂದು ಕೃಪಲಾನಿಯವರು ಹೇಳಲಿಲ್ಲವಂತೆ.

* * *

ಹೆರಿಗೆ ಆಸ್ಪತ್ರೆಗೆ ಹೋದರೂ ಕ್ಯೂ ನಿಲ್ಲುವುದು ತಪ್ಪಲಿಲ್ಲವಂತೆ.

* * *

ಸಂಸ್ಕೃತ ರಾಷ್ಟ್ರಭಾಷೆಯಾಗಬೇಕು. (ಪಂ. ಕುನ್ಜ್ರು)—

—ಇಂಗ್ಲೀಷ್ ರಾಷ್ಟ್ರಭಾಷೆ ಆದಾಗಲೂ ಬೋರೇಗೌಡ ಬೆದರಲಿಲ್ಲ, ಸಂಸ್ಕೃತಕ್ಕೆ ಹೆದರುತಾನೆಯೇ ?

* * *

ಸ್ವೀಡನ್ನಿನ ಮಂಜಿನ ಗಡ್ಡೆಗಳಲ್ಲಿ ಉಗುರು ೨೦ ಅಂಗುಲ ಇರುವ ಒಂದು ಅದ್ಭುತ ಮೃಗವು ಇದೆಯಂತೆ—

—ಅಂದಮೇಲೆ ಅದೂ ವೀಣೆ ಬಾರಿಸುತ್ತೇನೋ ?

* * * *

ಹೋಟಲುಗಳ ಹತ್ತಿರ ಒಂದೊಂದು ಔಷಧಾಲಯ ಇರಲೇಬೇಕು ಎಂದು ಕಾನೂನು—

—ಆಗಬೇಕಾಗಿಲ್ಲವಂತೆ.

* * *

ಆಗ, ವಾರಕ್ಕೆ ಅಂತ ಬಂದ ಹುಡುಗ ಮನೆ ಅಳಿಯ ಆದ—

—ಈಗ ಅಳಿಯ ಅಂತ ಆದವನು ವಾರ ವಾರಕ್ಕೂ ಬಂದ-ರೇಷನ್ ಕಾಲದಲ್ಲಿ.

* * * *

ಕ್ರಾಂತಿಕಾರಕರ ಸಭೆಯಲ್ಲಿ 'ಶಾಂತಿ ಶಾಂತಿ' ಎಂದು ಅಧ್ಯಕ್ಷರು ಕೂಗುತ್ತಿದ್ದುದು ಕೇಳಿಸಿತಂತೆ.

* * *

ಈ ಜವಾಬ್ದಾರಿ ಸರ್ಕಾರ ಸಣ್ಣ ಪುಟ್ಟ ಸಂಸ್ಥಾನಗಳಲ್ಲಿ ಹರಡಿದ್ದರಿಂದ, ನಮ್ಮೂರಿನ ನಿವೃತ್ತ ಅಧಿಕಾರಿಗಳು ನಿರುದ್ಯೋಗಿಗಳಾಗುವರಂತೆ.

* * * *

ಕುಡುಗೋಲು ಮನೆದರೆ—ಟ್ರೂಮನ್ ಆಟ್ಲಿ—

—ಇಬ್ಬರೂ ಹಲ್ಲು ಕಡಿಯುತ್ತಾರಂತೆ.

* * * *

—o—

ಉರಿಗಾಳು

" ದಯವಿಟ್ಟು ಮಾತನಾಡಬೇಡಿ '' ಎಂದು, ಚಪ್ಪರದ ಕಂಬಕಂಬಕ್ಕೂ. ಚೀಟಿ ಅಂಟಿಸಿದ್ದರೂ ಕೂಡ, ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದವರ ಕಿವಿಗಳೆಲ್ಲ ತೂತು !

* * * *

" ಪಾಕಿಸ್ತಾನ ಇಂಡ್ಯಾವನ್ನು ಈಗ ಸೇರಲು ಬಯಸಿದರೆ, ನಾವು ಅದನ್ನು ಸ್ವಾಗತಿಸುವುದಿಲ್ಲ " (ನೆಹರು , ಪಟೇಲ್) ಇಂಡ್ಯಾವನ್ನು ಪಾಕಿಸ್ತಾನಕ್ಕೆ ಈಗಲೇ ಸೇರಿಸುವುದಕ್ಕೆ ನಾವು ಪ್ರಯತ್ನಮಾಡುತ್ತೇವೆ. (ಇಂಡೋ ಪಾಕಿಸ್ತಾನ್ ಇಸ್ಲಾಂ ಲೀಗ್, ಲಾಹೋರ್)

* * * *

ಬಿಳಿ ಜನಾಂಗಗಳ ಅವಿವೇಕದಿಂದುಂಟಾಗಬಹುದಾದ, ಮೂರನೆಯ ಮಹಾ ಯುದ್ಧಕ್ಕೆ ಇಂಡ್ಯನರಿಗೆ ಬದಲಾಗಿ, ಆಫ್ರಿಕಾದ ಕರೀ ಜನರನ್ನೇ ಉಪಯೋಗಿ ಸಲು ತಕ್ಕ ವ್ಯವಸ್ಥೆ ಮಾಡಲಾಗುತ್ತಿದೆ. (ಪಾರ್ಲಿಮೆಂಟ್ ಚರ್ಚೆ)

* * *

" ಹಿಂದೂಜನರ ಪೈಕಿ, ಮೇಲಿನ ಮೂರು ಜಾತಿಯವರು ಮಾತ್ರ ಮುಸ್ಲಿಮ ರೊಂದಿಗೆ ಊಟಮಾಡುವುದಿಲ್ಲ , ಮದುವೆ ಸಂಪರ್ಕವನ್ನಿಟ್ಟುಕೊಳ್ಳುವುದಿಲ್ಲ " (ಸರ್ ಜಫರುಲ್ಲಾ ಖಾನ್. ಅಮೇರಿಕಾ ಭಾಷಣ) U. N O ದಲ್ಲಿ ವಾದಿಸುವ ಲಾಯರುಗಳು ಯಾರೂ " ನಿಜವನ್ನೇ ಹೇಳುತ್ತೇವೆ " ಎಂದು ಪ್ರಮಾಣ ಮಾಡ ಬೇಕಾಗಿಲ್ಲವೆಂಬುದು ಗಮನಿಸತಕ್ಕ ವಿಷಯ.

* * * *

" ದಿವಾನರ ಹೃದಯ ಪರಿವರ್ತನೆಯಾಗಿದೆ '' (ನವಂಬರ್ ಭಾಷಣ) ಮಂತ್ರಿಗಳ ಹೃದಯ ಪರಿವರ್ತನೆಯಾಗಿದೆ (ಜನವರಿ ಭಾಷಣ)

* * * *

“ ಬಟ್ಟೆಮೇಲಿನ ಹತೋಟಿಯನ್ನು ತೆಗೆದುಹಾಕಿದರೂ ಕೂಡ, ಸರ್ಕಾರಿ ಕಚೇರಿಗಳಲ್ಲಿ ಉಡುಪಿನ ಮೇಲಿನ ಹತೋಟಿಯನ್ನು ತೆಗೆದುಹಾಕದಿರುವುದು ಶೋಚನೀಯ.” (ಪತ್ರಿಕೆ) ಅರೆಬೆತ್ತಲೆ ಮಂತ್ರಿಗಳ ಮುಂದೆ ನಿಲ್ಲಲು ತುಂಬು ಪರಂಗಿ ಉಡುಪಿನ ನೌಕರರು ಅಂಜುತ್ತಿರುವುದು ಸಹಜ.

* * * *

“ ಉದಯವಾಯಿತು ನಮ್ಮ ಚೆಲುವ ಕನ್ನಡನಾಡು ”.... ಆದರೆ, ಕನ್ನಡಿಗರು ಮಾತ್ರ ಇನ್ನೂ ನಿದ್ದೆಯಿಂದ ಎದ್ದಿಲ್ಲ.

* * * *

“ ಹೊಸಮಾದರಿಯ ಅಲಾರಂ ಗಡಿಯಾರಗಳು ” (ಜಾಹಿರಾತು) ನಮ್ಮನ್ನೆಚ್ಚರಿಸುವ ಅಲಾರಂ ಗಡಿಯಾರ ಗಂಟೆ ಬಡಿಯಬೇಕಾಗಿಲ್ಲ. ನಿಶ್ಚಿತ ಸಮಯಕ್ಕೆ ಸರಿಯಾಗಿ ಕಾಫಿ ವಾಸನೆಯನ್ನು ಹೊರಸೂಸಿದರೆ ಸಾಕು.

* * * *

“ ಏನು ಸ್ವಾಮಿ ! ತಮ್ಮ ಮಗಳಿಗೆ ವರ ಗೊತ್ತುಮಾಡಿದೀರಿ, ಅಂತ ಕೇಳಿದೆ ; ತುಂಬ ಸಂತೋಷ !............ಯಾರು ? ಭಾಗ್ಯವಂತ ...ಗಂಡಸು ? ”

“ ವರನ ತಂದೆ ! ”... ....

* * * *

“ ಕನ್ನಡ ಚಿತ್ರಗಳ ತಯಾರಿಕೆಯಿಂದ, ಇತರ ಭಾಷೆಗಳ ಚಿತ್ರಪ್ರಚಾರಕ್ಕೆ ಕರ್ಣಾಟಕದಲ್ಲಿ ಕೊಂಚವೂ ಧಕ್ಕೆ ತಗಲುವಂತಿಲ್ಲ ” (ಭಾಷಣ) ಕನ್ನಡಿಗರ ಕಲಾಭಿಮಾನ ಚಿರಕಾಲ ಬಾಳಲಿ.

* * * *

ಸರ್ಕಾರವನ್ನು “ ನಮ್ಮನ್ನು, ಹೊಟ್ಟೆಗೆ ಬಟ್ಟೆಗೆ ಕೊಟ್ಟು, ಕಾಪಾಡುವ ಧಣಿ ” ಎಂದು ಇನ್ನುಮೇಲೆ ಯಾರೂ ಹೇಳುವ ಹಾಗಿಲ್ಲ.

* * * *

—o—



ಕಾಳಿಂಗ ಸಂತೆ ಮರ್ದನ.

ಉಪವಾಸ

(ಗಾಂಧಿ)

ಟಗರೆರಡ ಖತಿಗೊಳಿಸಿ ಬಲುಗಾ
ಳಗವ ನೋಡುವರಂತೆ, ನಮ್ಮನು
ಹಗೆಗೊಳಿಸಿ ಕಲಿಮಾಡಿ ಬಿಡುವರು ಕೆಂಡಭಕ್ಷಕರು
ನಗುತ ವಿಷ ಬಿತ್ತುವರು, ಪಿಸುಣರು,
ಜಗುಳಿದವದಿರು ; ಬಳಿಕ ಕಡೆಯುತಿ
ಹೊಗುವೆವೈ ನಾವಿಬ್ಬರನ್ಯಾಯದ ನಾಶನಕೆ.

ಕೋಪವೆಂಬುದನರ್ಥಸಾಧನ,
ಕೋಪದಿಂದಲೆ ಒಡೆವ ಚಿಂತನೆ,
ಕೋಪದಿಂ ಕೈಗತದ ಬಿಡುಗಡೆಯು ಬಯಲಹುದು.
ಕೋಪವನು ಪರ್ಜಿಸಲು ಬೇಹುದು,
ಕೋಪವುಳ್ಳವರಾವ ಡೊಮಿನಿಯ
ಪೀಪಿಲಾಗಲಿ ಕಾಪುರುಷ ಮುಸ್ಲೀಮಿಂದು ಯಾ ಸಿಖರು

— ಎಂದು ಉಪವಾಸ ಕೈಕೊಂಡಾಗ —

ನುಡಿನುಡಿಗೆ ಶರಣಾರ್ತಿ ಕುಶಲವ
ನಡಿಗಡಿಗೆ ಸೌಹಾರ್ದನೀತಿಯು
ಗುಡಿಯ ಬೀಡಿನ ಮಹಿಳೆ ಮಕ್ಕಳ ರಕ್ಷೆ ಚಿಂತೆಯುಲಿ
ಹಿಡಿದ ದುಗುಡದ ಕವಿದ ಕರುಣೆಯು
ಗಡಣದಲಿ ನೆಹರು ವಲ್ಲಭ
ರೊಡನೆ ಮುಳುಗಿತು ದುಃಖವಾರಿಧಿಗೆಲ್ಲ ಸುಮನಸರು

— ೫ನೆಯ ದಿನ —

ಅಳಿವ ಒಡಲಿದು ಅವನಿಸಾಗರ
ವುಳಿಯಲುಳಿಯುವುದು ಕೀರ್ತಿ, ಸೋದರ
ರೊಳಗೆ ಹೊಯ್ದಾಡಿ ಕೆಟ್ಟರು ಎಂಬ ದುರಿಯಶದ
ಹಳಿವು ಹೊರುವುದು ; ಸುಡಲಾ
ಛಲನ ! ರಿಜರ್ವ ಬ್ಯಾಂಕಿನ
ಉಳಿದ ಸೀ. ಬಿ ಯು ಕೊಡಿಸು ಫಿಫ್ಟಿಯ ಸಂತಸದಿ ಎಂದ

— ಆರನೆಯ ದಿನ —

ಧರೆಯ ಬಿಟ್ಟೆವು ಲೀಗರಿಗೆ. ನಾ
ವಿರುವರೊಡಹುಟ್ಟಿದರು, ಮತ ಮತ
ತರತಮವ ತ್ಯಜಿಸುವೆವು ಕರ್ಮನಭಾವ ಶುದ್ಧಿಯಲಿ
ತೆರಳುವೀ ಸಿರಿಗೋಸುಗ ಸೋ
ದರರ ಬಡಿವೆವೇ ? ಗಾಂಧಿ ! ಕರುಣಿಸು,
ಕರುಣಿಸಕಟಾ, ಬಟ್ಟೆದೋರ್ವೈ ನಿಜದ ನೇಮದಲಿ

— ಆಗ, ಗಾಂಧಿ —

ಮಾಡಿದಪರಾಧಂಗಳ ನೆನೆ
ದಾಡದತಿ ಕೋಪ ತಾಳದೆಯೆ
ಕೂಡಿ ಬದುಕುವ ದುಡಿಮೆ ದುಡಿದಡೆ ನನ್ನ ಮನಮೆಚ್ಚೆ.
ಸೇಡಿನೊಳಗಾಡದೆಲೆ. ಕಲಹವ
ಬೇಡದಲೆ, ನಾಡಿಗುಚಿತವ
ಮಾಡಿ ಇಂಡ್ಯವನುಳುಹಿರೆಂದನು, ಗಾಂಧಿ ತಪಸಿಲಿಸಿ.

" ಎಲೆ ಹಾಕಿವೆ ; ಊಟಕ್ಕೇಳೊ '' ಅಂತ ಅಂದರೆ, " ಯಾವ ಅಕ್ಕಿ, ಹೇಳು ! ಅಂದನಂತೆ.



ಕನ್ನಡಿಗ—ನಿಮ್ಮ ನಿಮ್ಮ ಸಾಮಾನು ನೀವು ಕಟ್ಟಿಕೊಳ್ಳಿ—

ಮಿಕ್ಕಿದ್ದಾದರೂ ನಂದೇ ಅಲ್ಲವೇ ?

—— o ——

ಕಚೇರಿಗಳಲ್ಲೂ ಮಿಲ್ಲುಗಳಲ್ಲೂ ಕಾರ್ಖಾನೆಗಳಲ್ಲೂ ಇತರ ಕೈಗಾರಿಕಾ ಕೇಂದ್ರಗಳಲ್ಲೂ ಮುಷ್ಕರ ಹೂಡಿ ಡಬ್ಬಲ್ ಕೂಲಿ ಭತ್ಯ ಬೋನಸ್ಸು ವಗೈರೆ ಗಿಟ್ಟಿಸುವ ಪ್ರಯತ್ನದಿಂದ ದೇಶದ ಮುಖ್ಯ ಮುಖ್ಯ ನಗರಗಳಲ್ಲೆಲ್ಲ ಒಂದೊಂದು ಅಚ್ಚುಕೂಟವನ್ನು ಸ್ಥಾಪಿಸಿ, ಕಾಗದದ ಮೇಲಿನ ಹತೋಟಿ ಹೆಚ್ಚಿಸಿ, ಕಂತೆಕಂತೆಯಾಗಿ........

* * *

ಶ್ರೀ॥ ಉತ್ತಮಿ ಸೂರ್ಯಧರ್ಮ ಎಂಬಾಕೆ ಜಾವಾದಿಂದ ಮೊನ್ನೆ ಮದ್ರಾಸಿಗೆ ಅಲ್ಲಿಯ ಮಹಿಳೆಯರ ಪರವಾಗಿ ಬಂದಿದ್ದ ಮಾನ್ಯಪ್ರತಿನಿಧಿ. ಆಕೆ ಮತದಲ್ಲಿ ಮುಸ್ಲಿಂ ಅಂತೆ........ ಪಾಪ ! ಇಲ್ಲಿಗೆ ಬಂದಾಗ ಯಾರೋ ಹೇಳಿದರಂತೆ, ಆಕೆಗೆ, ನಾವೂ ಅವರೂ ಏನೂ ಸಂಬಂಧವಿಲ್ಲದ ಎರಡು ಪ್ರ ಪ್ರತ್ಯೇಕ ಜನಾಂಗಗಳಿಗೆ ಸೇರಿದವರೆಂದು !

* * *

“ಹೆಚ್ಚು ಆಹಾರ ಬೆಳೆಯಿರಿ, ಎಂಬ ಚಳುವಳಿ ಒಂದು ಪ್ರಹಸನದಂತಾಗಿದೆ ” (ಮಂತ್ರಿಗಳ ಭಾಷಣ)....ಅಧಿಕಾರ ಸ್ವೀಕಾರದಿಂದ ಮನ ಬದಲಾಗಿಲ್ಲ ಎಂಬುದಕ್ಕೆ ಇದೂ ಒಂದು ನಿದರ್ಶನ.

* * * *

ಪಾತಾಳದಲ್ಲಿ ಪಾಪಯ್ಯ

(5. ರೇಸ್ ಕೋರ್ಸಿನಲ್ಲೊಂದು ಮಧ್ಯಾಹ್ನ)

ರೇಸ್ ಕೋರ್ಸಿನ ಆಕರ್ಷಣೆಗಳ ಅಲ್ಪಸ್ವಲ್ಪ ಅನುಭವವುಳ್ಳ ನಾನು ನನ್ನ ಆಗಿನ ಆರ್ಥಿಕಸ್ಥಿತಿಯನ್ನು ಮರೆಯದೆ ಜೇಬಿನಲ್ಲಿ ಐದೇ ಐದು ರೂಪಾಯಿನ ಒಂದು ನೋಟನ್ನು ಸ್ವಲ್ಪ ಚಿಲ್ಲರೆ ಸಹಿತ ಭದ್ರಪಡಿಸಿಕೊಂಡು ಬಂದಿದ್ದೆ. ಕೋರ್ಸಿನ ಅಂತರ್ಯಗಳನ್ನು ತೋರಿಸಿಕೊಡುವ ಭಾರವಹಿಸಿ ನನ್ನ ಜತೆಗೆ ಬಂದಿದ್ದ ಒಬ್ಬ ಹಳೇ ಹುಲಿ ಆ ಐದು ರೂಪಾಯನ್ನು ಅಂದಿನ ಸಾಯಂಕಾಲದೊಳಗಾಗಿ ಐನೂರಕ್ಕೆ ವೃದ್ಧಿಪಡಿಸಿ ಕೊಡುವೆನೆಂದು ಭರವಸೆ ಕೊಟ್ಟು ಅದನ್ನು ನನ್ನಿಂದ ಹಾರಿಸಿದ. ನಾನು ಮುಂಚೆಯೇ ಊಹಿಸಿದ್ದಂತೆ ನನ್ನ ಐದು ರೂಪಾಯಿ ಐದೇ ನಿಮಿಷದಲ್ಲಿ ನೀರಿನಪಾಲಾಯಿತು.

ಹಳೇ ಹುಲಿಯ ಹತ್ತಿರ ಸದ್ಯಕ್ಕೆ ಬೇರೆ ಯಾವ ಪುಡಿಕಾಸೂ ಇರಲಿಲ್ಲವಾದ್ದರಿಂದ ನಾವು ಎರಡನೇ ರೇಸಿನ ಗೋಜಿಗೆ ಹೋಗದೆ, ನಮ್ಮ ಸೋಲಿನ ಸರಿಯಾದ ಕಾರಣವನ್ನು ಕಂಡುಹಿಡಿಯುವ ಯೋಚನೆ ಮಾಡಿದೆವು; ಹ. ಹುಲಿ ಲಾಯದ ಕಡೆ ಹೋದ. ನಾವು ಗುರುತಿಸಿದ್ದ ಕುದುರೆ ಒಳ್ಳೇ ಹೆಸರುವಾಸಿಯಾದದ್ದು. ಮೊದಲು ಮೊದಲು ಒಳ್ಳೇ ಚುರುಕಿನಿಂದ ಓಡುತ್ತಿದ್ದದ್ದು, ಅರ್ಧದಾರಿ ಸವೆಯುವುದರೊಳಗೆ, ಅದಕ್ಕೇನು ಕೇಡು ಬಂತೋ ಏನೋ, ಇದ್ದಕ್ಕಿದ್ದ ಹಾಗೆ ತಟಕ್ಕನೆ ನಿಂತು. ವಾಹಕನನ್ನು ಕೆಳಕ್ಕೆ ಕೆಡವಿ, ಕೆನೆಯುತ್ತಾ ಹಿಂದು ಹಿಂದಾಗಿ ಬಾಲ ಮುದುರಿಕೊಂಡು ಓಡಿಹೋಗಿತ್ತು.

ಲಾಯದಿಂದ ವಾಪಸು ಬಂದ ಹ. ಹುಲಿ ಎಲ್ಲವನ್ನೂ ವಿವರಿಸಿದ. ನಾವು ಇನ್ನು ಎರಡೇ ಎರಡು ನಿಮಿಷ ಮುಂಚೆ ಬಂದಿದ್ದರೆ, ಅಲ್ಲಿ ನಡೆದಿದ್ದ ಒಳತಂತ್ರವನ್ನ ತಿಳಿದು ಒಂದೇ ಹೊಡೆತಕ್ಕೆ ಒಂದಕ್ಕೆ ನಲವತ್ತರಷ್ಟು ಸಂಪಾದಿಸಬಹುದಾಗಿತ್ತಂತೆ.

" ಎಲ್ಲಾದಕ್ಕೂ ಅದೃಷ್ಟ ಬೇಕು ಸ್ವಾಮಿ '' ಅಂದ ಹಳೇ ಹುಲಿ.

" ಸಂದೇಹವೇ ಇಲ್ಲ '' ಅಂದೆ ನಾನು.

" ಬರ್ತಾ ಬರ್ತಾ ನನ್ನ ಜ್ಞಾಪಕಶಕ್ತೀನೇ ಹೋಗ್ತಾ ಇದೆ ಸ್ವಾಮಿ. ಅಲ್ಲಾ, ಮೊನ್ನೆ ತಾನೇ ಓದಿದೆ ಪೇಪರ್ನಲ್ಲೀ ಟ್ರೈನರ್ ಸಿಂಪಸನ್ ನಾಳೆ ರಿಟೈರಾಗಿ ಮೈಸೂರಿಗೆ ಹೋಗ್ತಾನೆ ಅಂತ. ತಿಳಿದೂ ತಿಳಿದೂ ಇದು ಮೇಡಪ್ ರೇಸು ಅನ್ನೋದನ್ನ

ಮರೆತೆನಲ್ಲಾ, ಹಯ್ಯೋ ! ''—ಹ. ಹುಲಿ ತಲೆ ಚಚ್ಚಿಕೊಂಡ ಬಲವಾಗಿ, ಹಣ ಕೈತಪ್ಪಿಹೋದ ದುಃಖದಲ್ಲಿ.

" ಮೋಡಪ್ ರೇಸು ಅಂದರೆ ? '' ಅಂದೆ ನಾನೂ.

" ಆ ರೇಸಿನಲ್ಲಿ ಸಿಂಪ್‌ಸನ್ ಐವತ್ತುಸಾವಿರ ರೂಪಾಯಿ ಗಂಟು ಮಾಡಿಕೊಂಡನಂತೆ. ಮೈಸೂರಲ್ಲಿ ಆಗಲೇ ಬಂಗಲೆ ನೋಡಿಟ್ಟಿದ್ದಾನಂತೆ, ಹೋಗಿ ಇರೋದಕ್ಕೆ. ಜಾಕಿಗಳೆಲ್ಲ ಮಾತಾಡಿಕೊಂಡು ಸಿಂಪಸನ್ನಿನ ಬುತ್ತಿಗೆ ಕಲ್ಲು ಬೀಳದ ಹಾಗೆ, ಅವನು ಕಟ್ಟಿದ ಕುದುರೆಯೇ ಬರೋ ಹಾಗೆ ಮಾಡಿದರು, ಈ ರೇಸಿನಲ್ಲಿ. ಅದಕ್ಕೇ ಮೋಡಪ್ ರೇಸ್ ಅಂತ ಅನ್ನೋದು ಇಂಥಾವನ್ನ. ನಾವಿನ್ನು ಎರಡು ನಿಮಿಷ ಮುಂಚೆ ಬಂದಿದ್ದರೆ ನಾವೂ ' ಸಿಂಡರೆಲ್ಲಾ ' ಮೇಲೆ ಬೆಟ್ ಮಾಡಿ ಇನ್ನೂರು ರೂಪಾಯಿ ಸಂಪಾದಿಸಬಹುದಾಗಿತ್ತು. ಮುಖ್ಯ, ಅದೃಷ್ಟಬೇಕು ಸ್ವಾಮಿ. "

ಅವನ ಕಡೇ ವಾಕ್ಯವನ್ನ ಮನಸಾರೆ ಒಪ್ಪಿದೆ ಆ ರೇಸಿನ ವಿಚಾರವಾಗಿ ಇನ್ನ ಕೆಲವು ಸಂದೇಹಗಳು ಉಳಿದಿದ್ದವು, ಮನಸ್ಸಿನಲ್ಲಿ. ಅವನನ್ನೇ ವಿಚಾರಿಸಿ ಅವನ್ನ ನಿವಾರಿಸಿಕೊಂಡೆ.

" ಎಲ್ಲಾ ಸರಿಯೇ. ನಾವು ಗುರ್ತಿಸಿದ್ದ " ಬಾಡಿಗಾರ್ಡ್ '' ಅನ್ನೋ ಕುದುರೆ ಅಷ್ಟು ಪ್ರಖ್ಯಾತಿಯಾದದ್ದು ಅಂದಿರಲ್ಲ ಮತ್ತೆ – ಅದು ಯಾಕೆ ಹಾಗೆ ಹಿಂದು ಹಿಂದಾಗಿ ಓಡಿತು ? ''

" ಅದೂ ಈ ಪಿತೂರಿಗೆ ಸಂಬಂಧಪಟ್ಟದ್ದೇ. ' ಬಾಡಿಗಾರ್ಡ್ ' ಬಲವಾದ ಕುದುರೇನೇ. ಅದರಲ್ಲೂ, ಇವತ್ತು ಅದರ ಜಾಕಿ ' ಮೂರಿಯನ್ ' ಅಂದಮೇಲೆ ಕೇಳಲೇಬೇಕಾಗಿಲ್ಲವಲ್ಲ. ಆದರೆ ಬಾಡಿಗಾರ್ಡ್ ಎಲ್ಲರ ಫೇವರಿಟ್. ಅದರಮೇಲೆ ದುಡ್ಡು ಸುರಿದು, ಅದು ಗೆದ್ದಿದ್ದರೆ ಸಿಂಪಸನ್ನಿಗೆ ಸಂದಾಯವಾಗೋ ಬುತ್ತಿ ಭಾರವಿರುತ್ತಿರಲಿಲ್ಲ. ಅದಕ್ಕೇ ಹೆಸರಿಲ್ಲದ " ಸಿಂಡರೆಲ್ಲ" ಮೇಲೆ ಅವನು ಬೆಟ್ ಮಾಡಿದ. ಜಾಕಿಗಳೂ ಪಿತೂರಿ ಮಾಡಿದರು ' ಮೂರಿಯನ್ ' ಬೇಕಂತ ' ಬಾಡಿಗಾರ್ಡ 'ನ್ನ ಹಿಡಿದು ನಿಲ್ಲಿಸಿದ ''

" ಬೇಕಂತ ! ''

" ಹೌದು. ' ಮೂರಿಯನ್ ' ಕೂಡ ' ಸಿಂಡರೆಲ್ಲಾ' ಮೇಲೇ ದುಡ್ಡು ಕಟ್ಟಿದ್ದನಂತೆ ! ಹೇಗಿದೆ ! ! ''

ಸ್ವಲ್ಪಸ್ವಲ್ಪವಾಗಿ ರೇಸಿನ ಮರ್ಮಗಳೆಲ್ಲ ನನಗೆ ಅರ್ಥವಾಗ ಹತ್ತಿದವು

" ಇಷ್ಟುಮಾಡಿಯೂ ' ಸಿಂಡರೆಲ್ಲ ' ಗೆಲ್ಲದೇ ಹೋಗಿದ್ದರೆ ? '' ಅಂದೆ.

" ಇಲ್ನೋಡಿ. ಒಂದು ವಿಚಾರ ಚೆನ್ನಾಗಿ ನೀವು ತಿಳುಕೊಳ್ಳಿ. ಒಬ ಜಾಕಿಯಾಗಲೀ, ಟ್ರೈನರಾಗಲೀ ರಿಟೈರಾಗಿ ತಮ್ಮ ಕಡೇ ರೇಸನ್ನ ನೋಡುತ್ತಿದ್ದಾರೆ ಅಂತ ತಿಳಿದರೆ, ಆಗ ಆ ರೇಸಿನಲ್ಲಿ ಓಡುವ ಅತೀ ಸಾಧಾರಣವಾದ ಕುದುರೆ ಮೇಲೆ ಅವನ ಸಕಲ ಐಶ್ವರ್ಯಗಳೂ ಬೆಟ್ ಮಾಡಲ್ಪಟ್ಟಿರುತ್ತೆ ಅಂತ ತಿಳೀಬಹುದು. ಜಾಕಿಗಳು ಅವನಿಗೆ ನಷ್ಟವಾಗದ ಹಾಗೆ ನೋಡಿಕೋತಾರೆ. ಅವರಿಗೂ ತಕ್ಕ ಬಹುಮಾನ ಇದ್ದೇ ಇರುತ್ತೆ ಅನ್ನಿ."

" ಅಂಥಾ ಸಂದರ್ಭ ಹ್ಯಾಗೆ ತಿಳಿಯೋದು ? "

" ಆದೇನೂ ಕಷ್ಟವಿಲ್ಲ ರೇಸಿನ ದಿನ ಬೆಳಿಗ್ಗೆ, ಕೋರ್ಸಿಗೆ ಬಂದು ಅಲ್ಲಿ ಇಲ್ಲಿ ಸುಳಿದಾಡುತ್ತಿರಿ. ಲಾಯಗಳಿಗೆ ಸಂಬಂಧಪಟ್ಟ ಕೆಲವು ಆಳುಕಾಳುಗಳು ನಿಮ್ಮಂತಹ ಸತ್ಯಾನ್ವೇಷಿಗಳನ್ನು ಇದಿರು ನೋಡ್ತಾ ಅವರೂ ಅಲ್ಲಿ ಇಲ್ಲಿ ಸುಳಿದಾಡ್ತಾ ಇರ್ತಾರೆ ಅಂಥ ಆಳುಗಳು ನಿಮಗೆ ಕಂಡರೆ ಹತ್ತಿರ ಹೋಗಿ ಅವರ ಕೈಯಲ್ಲಿ ನಿಮ್ಮ ಕೈಯಲ್ಲಾದಷ್ಟನ್ನ ಇಟ್ಟು, ಕಣ್ಣು ಮಿಟುಕಿಸಿ (ಹುಷಾರಾಗಿ, ಯಾರ ಕೈಗೂ ಸಿಕ್ಕದ ಹಾಗೆ ನೋಡಿಕೊಳ್ಳಿ). ಎಲ್ಲಾ ತಿಳಿದುಬಿಡುತ್ತೆ ; ಯಾವ ಜಾಕಿ ಯಾವ ಕುದುರೆಮೇಲೆ ದುಡ್ಡು ಸುರಿಯುತ್ತಾನೆ, ಯಾವ ರಾಜಕುಮಾರ ಯಾವ ಕುದುರೇನ ಬೆನ್ನು ಹತ್ತಿದ್ದಾನೆ, ಯಾವ ರೇಸಿನ ಯಾವ ಕುದುರೇಗೆ ಹೆಂಡ ಕುಡಿಸುವ ಏರ್ಪಾಡಾಗಿದೆ, ಎಲ್ಲ ! "

" ತಡೀರಿ. ಕುದುರೆ ಹೆಂಡ ಕುಡಿಯುತ್ತೆಯೆ ? "

" ಕುದುರೆ ಕುಡಿಯೋದಿಲ್ಲ. ಕುಡಿಸ್ತಾರೆ ಕುದುರೆಗೆ, ಕೆಲವು ಇಕ್ಕಟ್ಟಾದ ಸಂದರ್ಭಗಳಲ್ಲಿ. ಈಗ, ಒಂದು ಕುದುರೆ, ಮುಸಲ, ಗೆಲ್ಲದೇ ಹೋದರೆ ಒಬ್ಬಾನೊಬ್ಬ ಕೋಟ್ಯಾಧೀಶ್ವರನಿಗೆ ಒಂದೆರಡು ಲಕ್ಷ ರೂಪಾಯಿ ನಷ್ಟವಾಗೋ ಸಂದರ್ಭ ಇದೆ ಅನ್ನಿ. ಆಗ ಈ ತಂತ್ರಗಳೆಲ್ಲಾ ನಡೆಯುವ ಸಂಭವ ಇರುತ್ತೆ."

" ತಿಳೀತು. ಆದರೆ ಆ ಕುದುರೆ ಹೆಂಡ ಕುಡಿಯದೆ ರಾಂಗ್ ಪೀಸ್ ಮಾಡಿದರೆ ? "

" ಕುದುರೆಗಳನ್ನು ಮೈಮರೆತು ಓಡೋಹಾಗೆ ಮಾಡೋದಕ್ಕೆ ಇನ್ನೂ ಎಷ್ಟೋ ದಾರಿಗಳಿವೆ. ಕೆಲವು ಉದ್ರೇಕಗೊಳಿಸುವ ಇಂಜಕ್ಷನ್‌ಗಳು ಕೂಡ ಇವೆ. ಆದರೆ ಮುಕ್ಕಾಲುವಾಸಿ ಕುದುರೆಗಳಿಗೆ ತೊಣಚಿ ಪ್ರಯೋಗ ಸಾಕು. "

" ತೊಣಚಿ ? " ಅಂದೆ ನಾನು, ಬಾಯಿ ದೊಡ್ಡದಾಗಿ ತೆರೆದು. ಹಳೇ ಹುಲಿ ವಿವರಿಸಿದ..... ..

" ಹೌದು, ತೊಣಚಿ. ಜಾಕಿಯ ಕೈಗೆ ಒಂದು ಒಳ್ಳೇ ಸೈಜಿನ ತೊಣಚಿ ಸಂಪಾದಿಸಿ ಕೊಡಬೇಕು. ನಶ್ಯದ ಡಬ್ಬಿಯಲ್ಲೋ, ಗ್ರಾಮೋಫೋನ್ ಮುಳ್ಳಿನ

ಡಬ್ಬಿಯಲ್ಲೋ, ಯಾತರಲ್ಲಾದರೂ ಹಾಕಿ. ಅವನು ರೇಸಿನ ಸಮಯದಲ್ಲಿ ತೊಣಚಿಯನ್ನ ಅಂಗೈಯಲ್ಲಿ ಬಚ್ಚಿಟ್ಟುಕೊಂಡು. ಸರಿಯಾದ ಕ್ಷಣದಲ್ಲಿ ಕುದುರೆಯ ಕುತ್ತಿಗೇಲಿ ಬಿಡುತ್ತಾನೆ ಅದನ್ನ. ಮಿಕ್ಕ ಕೆಲಸವನ್ನ ತೊಣಚಿ ನೋಡಿಕೊಳ್ಳುತ್ತೆ —ಎಲ್ಲಾ ಇರಲಿ ಬನ್ನಿ ಬನ್ನಿ, ನಾಲ್ಕನೇ ರೇಸಿನ ಹೊತ್ತಿಗಾದರೂ ಒಂದೈದು ರೂಪಾಯಿ ಸಂಪಾದಿಸಬೇಡವೇ !" ಅಂದವನೇ ನನ್ನನ್ನು ಆ ಜನಸಮೂಹದಲ್ಲಿ ಕೈಹಿಡಿದು ಎಳೆಯುತ್ತ ಅವಸರವಸರವಾಗಿ ಒಂದು ಕಾಫಿಕ್ಲಬ್ಬಿಗೆ ಕರೆದುಕೊಂಡು ಹೋದ.

ಅಷ್ಟರಲ್ಲಿ ನಾನು ಒಂದು ಚಿಕ್ಕ ಅಡ್ಡಪ್ರಶ್ನೆ ಹಾಕಿದೆ, ನೇರವಾಗಿ.

"ಎಲ್ಲಿಂದ ಸಂಪಾದಿಸುತ್ತೀರಿ, ಈಗ ಐದು ರೂಪಾಯಿ ?"

"ನೋಡ್ತಾ ಇರಿ—ಯಾರನ್ನಾದರೂ ಹಿಡಿದು, ನಾಲ್ಕನೇ ರೇಸಿಗೆ ಒಂದು "ಷೂರ್ ಟಿಪ್" ಕೊಡ್ತೇನೆ, ಟಿಪ್ ಫಲಿಸದೇ ಹೋದರೆ ರೂಪಾಯಿ ವಾಪಸು, ಅಂತ ಹೇಳಿ."

"ಒಂದುವೇಳೆ—ವಾಪಸು ಕೊಡೋಕೆ—ರೂಪಾಯಿ ?"

"ಆಗ, ಇನ್ನೊಂದು ಟಿಪ್ ಮಾಡೋದು, ಐದನೇ ರೇಸಿಗೆ. ಅದೂ, ಅವನ ಕಣ್ಣಿಗೆ ನಾವು ಬಿದ್ದಕಾಲಕ್ಕಲ್ಲವೇ !—ಬನ್ನಿ ಬನ್ನಿ—ಇದೆಲ್ಲ ಒಂದು ದೊಡ್ಡ ಸಮಸ್ಯೆಯೇನೇ ಹೇಳಿ !"

ದಿಗ್ಭ್ರಾಂತನಾಗಿ ನಾನು ಬಾಯಿ ಮುಚ್ಚಿದೆ.

ಕಾಫಿಕ್ಲಬ್ಬಿನಲ್ಲಿ, ಹರಳೆಣ್ಣೆ ಮುಖಮಾಡಿ ಕಾಫಿ ಕುಡಿಯುತ್ತಾ, ನಡುನಡುವೆ ಆಕಾಶ ನೋಡುತ್ತಾ ನಿಂತಿದ್ದ ಒಬ್ಬ ಕುರಿಯ ಹತ್ತಿರ ಸರಿದು, ಅವನ ಕಿವಿಯಲ್ಲಿ,

"ನಾಲ್ಕನೇ ರೇಸಿನಲ್ಲಿ ಗ್ಯಾರಂಟಿ ವಿನ್ನರ್——ಐದೇ ರೂಪಾಯಿ ಫೀಸು. ಟಿಪ್ ಬರದೇ ಹೋದರೆ, ರೂಪಾಯಿ ವಾಪಸ್ಸು" ಎಂದು ಊದಿದ ಹಳೇ ಹುಲಿ.

ಕುರಿ ಹಳ್ಳಕ್ಕೆ ಬಿತ್ತು.

—ಪುಂಗನೂರು ಪಾಪಯ್ಯ.

—— o ——

"ಸರ್ ಸಿ. ಪಿ. ರಾಮಸ್ವಾಮಿ ಅಯ್ಯರಿಗೆ ತಿರುವಾಂಕೂರಲ್ಲಿ ಅಷ್ಟು ಮುಖಭಂಗ ಆಗಬಾರದಾಗಿತ್ತು" (ಪತ್ರಿಕೆ)...ಅದರಿಂದ ತಾನೆ, ಈಗ ಅಮೇರಿಕನ್ನರಿಗೆ ವೇದಾಂತ ಬೋಧನೆ ಲಭಿಸುತ್ತಿರುವುದು !

• • •

ಮಗಳು ತಾಯಿ

ಅಂತೀರಾ ?



ಅಲ್ಲ ! ಅಲ್ಲಾ !!



ತಾಯಿ ಮಗಳು

ಅವರು.

ಬದಲಿ ಹೆಸರು

ಕಣಜದ ಗೂಡಿಗೆ ಕಲ್ಲು ಹೊಡೆದ ಹಾಗೆ, ಒಬ್ಬ ಮಹನೀಯರು ಮೊನ್ನೆ ಆಂಗ್ಲಪತ್ರಿಕೆಯೊಂದಕ್ಕೆ ಪತ್ರ ಬರೆದು, ಪ್ರಪಂಚದಲ್ಲೆಲ್ಲ ಅತ್ಯುನ್ನತವಾದ ಹಿಮಾಲಯ ಪರ್ವತಸ್ತೋಮದ ಅತ್ಯುನ್ನತ ಶಿಖರವಾದ "ಎವರೆಸ್ಟ್"ಗೆ, ಹೊಸ ನಾಮವನ್ನು ಬಳಿಯಬೇಕೆಂದೂ, ಅದು "ಗಾಂಧೀ ಪರ್ವತ" ಎಂದಿರಬೇಕೆಂದೂ ಸೂಚಿಸಿದರು. "ಉಚ್ಚೈಸ್ಸ್ಥಾನೇಷು ಪೂಜ್ಯಂ"ತೆ, ಎಂಬಂತೆ, ಉಚ್ಚಸ್ಥಿತಿಯಲ್ಲಿದ್ದುದೇ ಬಂತು, ಆ ಶಿಖರಕ್ಕೆ ತಾಪತ್ರಯವೆ. ಎವರೆಸ್ಟ್ ಎಂಬ ಹೆಸರಿನ ಪರಂಗಿಯವರೊಬ್ಬರು ಹಿಂದೆ ಇಂಡಿಯಾದೇಶದ ಸರ್ವೆ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದರಂತೆ. ಅವರ ಕಾಲದಲ್ಲಿ, ಅವರ ಕೈಕೆಳಗಿನ ಭಾರತೀಯರೊಬ್ಬರು ಆ ಶಿಖರದ ಎತ್ತರ ೨೯ ಸಾವಿರದ ೨ ಅಡಿ ಎಂದು ನಿಶ್ಚಯಿಸಿದರೆಂದೂ, ಆಗಿನವರು ಪರಂಗೀ ಪೂಜಕರಾಗಿದ್ದುದರಿಂದ, ಆ ಶಿಖರಕ್ಕೆ ಆ ಹೆಸರಿಟ್ಟರೆಂದೂ, ಪ್ರತೀತಿ. ಐವತ್ತು ವರ್ಷಗಳಿಂದಲೂ, ಪ್ರಪಂಚದ ಭೂಪಟಗಳಲ್ಲೂ ಭೂವಿವರಣೆಗಳಲ್ಲೂ ಭೂಗೋಳದ ಪ್ರಶ್ನೆಪತ್ರಿಕೆಗಳಲ್ಲೂ, ಅನೇಕ ಫಲಾಹಾರಮಂದಿರಗಳೂ ಸಿನಿಮ ಮಂದಿರಗಳೂ, ಆ ಹೆಸರನ್ನೇ ಬಳಕೆಗೆ ತಂದುಬಿಟ್ಟಿವೆ. ಈಗ, ಇಂಡಿಯ ಸ್ವತಂತ್ರವಾದಮೇಲೆ, ನಮ್ಮ ಬಿಡುಗಡೆಯ ಭೀಷ್ಮಾಚಾರ್ಯರಾದ ಗಾಂಧಿಯವರಿಗೆ ಇತರೇ ವಿಧಗಳಲ್ಲಿ ಸ್ಮಾರಕಗಳನ್ನು ನಿರ್ಮಿಸುವುದು ಕಷ್ಟಸಾಧ್ಯವಾಗಿರುವುದರಿಂದ, ಅತಿ ಸುಲಭದಲ್ಲೇ, ಅಲ್ಪವೆಚ್ಚದಿಂದಲೇ, ಎವರೆಸ್ಟನ್ನು ಗಾಂಧಿಯನ್ನಾಗಿ ಮಾರ್ಪಡಿಸಿಬಿಡಬಹುದೆಂಬುದು ಅನೇಕರ ಅಭಿಮತ.

ಆದರೆ, ಆಗಲೇ ಅನೇಕರು, ಸನಾತನಿಗಳೂ, ಭೂಗೋಳ ಪಾಠಕರೂ ಇದನ್ನು ವಿರೋಧಿಸಿದಾರೆ. ಹೊಸ ಹೆಸರನ್ನು ಜಾರಿಗೆ ತರುವುದು ಕಷ್ಟವೆಂದಿದಾರೆ; ನೊಂದ ಜೀವಿಗಳಿಗಾಗಿ ಸದಾ ಸಹತಪಿಸುತ್ತಿರುವ ಗಾಂಧಿಯವರ ಹೆಸರು ಅನುಚಿತವೆಂದಿದಾರೆ. "ಹಿಮಾಲಯನ್ ತಪ್ಪು" ಎಂಬ ಪದವನ್ನು ಮೊದಲು ಪ್ರಚಾರಕ್ಕೆ ತಂದ ಗಾಂಧಿಜಿಯವರ ಹೆಸರನ್ನು ಆ ಶಿಖರವು ಸಹಿಸುವುದೆ, ಎಂದು ಕೇಳಿದಾರೆ. "ಮೇರು" "ಹಿಮಗಿರಿ" "ಗೌರೀಶಂಕರ" ಎಂಬ ಬದಲಿ ಹೆಸರುಗಳನ್ನು ಸೂಚಿಸಿದಾರೆ. ಗೌತಮಬುದ್ಧನ ಹೆಸರನ್ನೇಕಿಡಬಾರದು, ಎಂಬ ಪ್ರಶ್ನೆಯೂ ಎದ್ದಿದೆ. ಅಶೋಕನ ಹೆಸರಿಗಿಂತ ಸಮನ್ವಯವಾದ ಹೆಸರು ಬೇರೊಂದಿಲ್ಲವೆಂದು ಒಬ್ಬರು ಹೇಳುವುದರೊಳಗೆ, ಅಶೋಕನ ಪ್ರಾಚೀನ ಸಾಮ್ರಾಜ್ಯಕ್ಕೆ ಸೇರದೆ ಸ್ವತಂತ್ರವಾಗಿದ್ದ ಚೇರ ಚೋಳ ಪಾಂಡ್ಯ ನಾಡುಗಳ ಈಗಿನ ಹಲವು

ದ್ರಾವಿಡನಾಯಕರು ಅದನ್ನು ಪ್ರತಿಭಟಿಸಿದಾರೆ. ಅಲ್ಪಸಂಖ್ಯಾತರಾದ ದ್ವಿಜರು (ಅಂದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರು)ಗಳ ಹೆಸರನ್ನಿಡಲೇ ಕೂಡ ದೆಂದು ಬಹುಸಂಖ್ಯಾತ ಏಕಜರು ಗೊಂದಲ ಎಬ್ಬಿಸುತ್ತಿದಾರೆ. ಬುದ್ಧನೂ ದ್ವಿಜ; ಅಶೋಕನೂ ದ್ವಿಜ ! ಅಲ್ಲದೆ, ಅಶೋಕನಿಗೆ ಪ್ರತಿಯಾಗಿ ಅಕ್ಬರ ! ಪ್ರಜಾಪಕ್ಷ ದವರ ವಿರೋಧ ಬೇರೆ, ರಾಜರ ಹೆಸರಿಡುವುದಕ್ಕೆ !

ಸಂಸ್ಕೃತವನ್ನು ಸಹಿಸದ ಕೆಲವರು ಕಡುಗಲಿಗಳು ಹಿಮಗಿರಿ ಎಂಬುದ ನ್ನೊಪ್ಪುವುದಿಲ್ಲ. "ಆಸೇತು ಹಿಮಾಚಲ" ಎಂಬ ಮಾತಿನಿಂದ, ಹಿಮಾಚ ಲಕ್ಕೆ ಆನೇತು ಎಂಬ ದ್ರಾವಿಡ ಹೆಸರೊಂದು ಹಿಂದೆಯೇ ಇದ್ದಂತೆ ಸ್ಪಷ್ಟವಾಗು ತ್ತದೆ. ಅದನ್ನೇ ಏಕೆ ಪುನರುದ್ಧಾರಮಾಡಬಾರದು, ಎಂದು ದಾಕ್ಷಿಣಾತ್ಯ ಡಾಕ್ಟ ರೊಬ್ಬರು ಚಳುವಳಿ ಹೂಡಿದ್ದಾರೆ.

ವೈದಿಕರು "ಮೇರು" ಎಂದೂ, ಬೌದ್ಧರು "ವೃದ್ಧಕೂಟ ಪರ್ವತ" ಎಂದೂ, ದ್ರಾವಿಡರು "ಚೆಂಗುಟ್ಟುವನ್" ಎಂದೂ, ಇತಿಹಾಸಕರು "ಏಕಶಿಲಾ" "ಶಿಲಾದಿತ್ಯ" "ಮೇಘವರ್ಣ" ಎಂದೂ ವಾದಿಸುತ್ತಿರುವಾಗ, ಛೆ–ಎನ್ನುತ್ತ ಎವರೆಸ್ಟ್ ಶಿಖರವನ್ನೇರಲು ಅಮಿತಸಾಹಸದಿಂದ ಪ್ರಯತ್ನಿಸಿದ ಮಹಾಶೂರರಾದ 'ಸ್ಮೈತ್' ಎಂಬವರಿಗಾದ ಅನುಭವವೊಂದು ಯಾರ ನೆನಪಿಗೋ ಬಂತು. "ಆರ ನೆಯ ಕ್ಯಾಂಪು" ಎಂಬ ಅವರ ಗ್ರಂಥದಲ್ಲಿ ಅವರು ಮುಕ್ಕಾಲು ದಾರಿ ಹತ್ತಿ ಬಿಡಾರಮಾಡಿ ಮೇಲೇರಲು ಹವಣಿಸುತ್ತಿರುವ ಒಂದು ಪ್ರಾತಃಕಾಲದ ವರ್ಣನೆ ಬರುತ್ತದೆ. "ಆಕಾಶ ನೋಡುತ್ತೇನೆ ! ರಜತಮಯವಾದ ಒಂದು ಪದಾರ್ಥ ರೊಯ್ಯನೆ ಪಡುವಲಿಂದ ಮೂಡಲಿಗೆ ಅತೀ ಎತ್ತರದಲ್ಲಿ ಹಾರಿತು ! ಏನದು ? ವಿಮಾನವೇ ? ಅಲ್ಲ. ಪಕ್ಷಿಯೇ ? ಅಷ್ಟು ಚೆನ್ನಾಗಿ ತೊಳಗುವ ಹಕ್ಕಿಯಾವುದು? ಇದೊಂದು ಪವಾಡವೇ ಸರಿ" ಎಂದಿದಾರೆ. ಹೀಗೆ ಅನೇಕ ಜನ ಕಂಡದ್ದೂ ಕಾಣದಿದ್ದದ್ದೂ ಕೂಡಿದರೆ, ಸಾವಿರ ಪವಾಡಗಳುಂಟು. ಆದ್ದರಿಂದ, "ಪವಾಡ್ ಪಹಾಡ್" ಎಂದೇಕಾಗಬಾರದು, ಎಂದೊಬ್ಬರು ಬರೆದರು. ಹಿಮಾಲಯ ಪ್ರಾಂತದಲ್ಲಿ ಅನೇಕ ದಶಕಗಳಿಂದಲೂ ವಾಸಿಸಿ ಅಲ್ಲಿಯ ಐತಿಹ್ಯಗಳನ್ನೆಲ್ಲ ಚೆನ್ನಾಗಿ ಅರಿತು ಅಲ್ಲೇ ಮಡಿದ ಡಾ|| ನಿಕೊಲಸ್ ರೋರಿಕ್‌ರವರು ಬರೆದಿರುವ ಒಂದು ಉದ್ಗ್ರಂಥವನ್ನು ಮಗುದೊಬ್ಬರು ಹೊರಕ್ಕೆ ತಂದರು.


ಎವರೆಸ್ಟ್ ಶಿಖರಕ್ಕೆ ಟಿಬೆಟ್ ದೇಶದವರು ಇಟ್ಟಿರುವ ಹೆಸರೇ ಚೆನ್ನ-ಅತ್ಯಂತ ರಮಣೀಯ. ಅದನ್ನು ಬಳಸುವುದೇ ನ್ಯಾಯ, ಎಂದು ಹೇಳಿ, ರೋರಿಕ್ ರವರು ಕೊಟ್ಟಿರುವ ಆ ಹೆಸರನ್ನು ಅವರು ಉದಹರಿಸಿದಾರೆ.

ಎವರೆಸ್ಟ್ ಶಿಖರ ಇರುವುದು ಟಿಬೆಟ್ ದೇಶದಲ್ಲಿ! ಇಂಡಿಯಾದಲ್ಲಲ್ಲ. ಕಂಡವರ ಕೂಸಿಗೆ ಹೆಸರಿಡುವುದು ಸರಿಯಲ್ಲ? ಎಂದು ಮೊನ್ನೆ ಒಬ್ಬರು ಬರೆದಿರುವುದರಿಂದ, ಈ ಚಳುವಳಿಯ ಫಲವಾಗಿ ಆ ಟಿಬೆಟ್ ಹೆಸರನ್ನೇ ಜಗತ್ತೆಲ್ಲ ಒಪ್ಪಬೇಕಾಗುತ್ತದೋ, ಏನೊ?........

ರೋರಿಕ್‌ರವರ ಗ್ರಂಥದಂತೆ, ಆ ಹೆಸರು "ಜ್ಸೋವೋ—ಕ್ಹಂಗ್—ಕ್ಹರ್"!.. ... ...

ಇದಕ್ಕಿಂತ, ಎವರೆಸ್ಟೇ ವಾಸಿ, ಅಲ್ಲವೆ?

—o—



ನನ್ನ ಅಳತೆ

ತಂದೆ ಜೊತೆಗೆ ನಾನು ಅವತ್ತು ಸಯ್ಯಾಜಿರಾವ್ ರಸ್ತೆಗೆ ಹೋದೆ, ಬಟ್ಟೆ ಚುನಾಯಿಸುವುದಕ್ಕೆ. ನನಗೆ ಉಲ್ಲನ್ ಬಟ್ಟೆ ನಾಜೋಕು ನಯ ಎಳ್ಳಷ್ಟೂ ತಿಳಿಯದು. ನಮ್ಮ ತಂದೆ ನನಗಿಂತ ಹಳ್ಳಿ. ಅದುವರೆಗೂ ನಾನು ಉಲ್ಲನ್ ಧರಿಸಿದ್ದೇ ಇಲ್ಲ. ನವರಾತ್ರಿಯಿಂದ ಶಿವರಾತ್ರಿವರೆಗೂ ನನಗೆ ನಡುಕವೇ ಗತಿ. ರಾತ್ರಿ ಶಾಖಾಮೃಗದಂತೆ ಮುದುರಿಕೊಂಡು ಬಿದ್ದಿರುವೆ. ನಮ್ಮಪ್ಪ ಉಲ್ಲನ್ ಬಟ್ಟೆಗೆ ಕಂಬಳಿ ಅರಿವೆ ಅಂತಾನೆ.

ಅಂಗಡಿಗೆ ಹೋಗುತ್ತಲೂ, ನಿಮ್ಮಲ್ಲಿ ಇರುವುದರಲ್ಲಿ ಬಹಾಳ ಬೆಲೆ ಇರುವ ಕಂಬಳಿ ತೆಗಿಯಿರಿ, ಅಂದ, ಅಪ್ಪ. ಅವನು, ಡಾನಿಗಲ್ಲು ಗಾಬರ್ಡೀನು, ನೇವೀಬ್ಲೂ ಅಂತ ಏನೇನೋ ಹೆಸರುಗಳನ್ನೊದರಿದ. ಗಜಕ್ಕೆ ರೂ. 47-8-0ನೇ ವರಿಷ್ಠವಕ್ಷ ಅಂದ. ಆಗ, ಅಪ್ಪ "ಇಕೊ! ಇವನಿಗೆ ಒಂದು ಕೋಟು, ಒಂದು ಷರಾಯಿ ಎರಡು ಕಾಲಿಗೂ" ಅಂದ. ಆಗ, ಅವನು, "ಓ! ಈ ಸಾವ್ರಿಯವರಿಗೋ ಮದುವೆ? ಹಾಗಾದರೆ, ಇದನ್ನೇ ತಕೊಳ್ಳಿ. ಮೊನ್ನೆ ಡೀ. ಸೀ. ಮಗಳ ಮದುವೆಗೆ ಇದನ್ನೇ ತೆಗೆದರು" ಎಂದು ಹೇಳಿ, ತಮ್ಮ ಆರ್ಡರ್ ಬುಕ್ ಬಿಚ್ಚಿ, "ನೋಡಿ! ಈ ಸೀಸನ್‌ನಲ್ಲಿ 15 ಗಂಡುಗಳಿಗೆ ಇದೇ ಬಟ್ಟೆಯಲ್ಲೇ ಹೊಲೆದುಕೊಟ್ಟಿದೇವೆ" ಎಂದ. ನಮ್ಮಪ್ಪನಿಗೆ ಅಷ್ಟುಬೇಗ ಒಪ್ಪಿಗೆಯಾಗುತ್ತದೆಯೆ? ತೂತು ಬೀಳುತ್ತದೆಯೆ? ಹುಳಹೊಡೆಯುತ್ತದೆಯೆ? ನೀರಿಗೆ ಹಾಕಬಹುದೆ? ಹೊಳೆಯಲ್ಲಿ ಒಗೆಯಬಹುದೆ? ಎಂದೆಲ್ಲ ಕೇಳಿದ. ಅವರು ಅವನನ್ನು ಲೇವಡಿ ಮಾಡಿ ನಕ್ಕಾಗ, ನನಗೆ ಕೋಪವೂ ನಾಚಿಕೆಯೂ ಬಂತು. 3½ ಗಜ ಸಾಕು ಅಂತ ಅವರು ಅಂದಾಗ, ಪರವಾಗಿಲ್ಲ, ಇನ್ನೂ ಎರಡು ಮೂರು ಗಜ ಸೇರಿಸಿ ಹರಿಯಿರಿ, ಎಂದ. ಅದಕ್ಕವರು. "ಉಲ್ಲನ್ 3½ ಗಜ ಸಾಕು. ಉಳಿದ ಚೂರು ಪಾರು ನಲವತ್ತೈವತ್ತು ರೂಪಾಯಿನದು ಬೇಕಾಗುತ್ತೆ" ಅಂದಾಗ, ಅಪ್ಪನಿಗೆ ಸಮಾಧಾನವಾಯಿತು.

ಆಮೇಲೆ, ಅವರು ನನ್ನನ್ನ ಒಳಕ್ಕೆ ಕರೆದುಕೊಂಡು ಹೋದರು. ನಾನು ಹೆಣ್ಣು ನೋಡುವುದಕ್ಕೆ ಹೋದಾಗಿನ ಸೂಟನ್ನೇ ಧರಿಸಿದ್ದೆ. "ದೊಡ್ಡಮನುಷ್ಯರ ಮನೆ ಹೆಣ್ಣು; ಪಂಚೆಗಿಂಚೆ ಉಟ್ಟು ಬರಬೇಡ, ಕಣೊ" ಅಂತ ಅಪ್ಪನೇ ಹೇಳಿದ್ದ. ಸೂಟು ಹಾಕಿಕೊಂಡರೆ, ಹೆಣ್ಮನ ಕರಗುತ್ತದೆ ಅಂತ ಅವನಿಗೆ ಯಾರೋ ಹೇಳಿದ್ದರಂತೆ. ಅಂತು, ಅವನ ಆಸೆ ನೆರವೇರಿತು.

ಆ ಕೋಣೆ ಗೋಡೆತುಂಬ, ಕಲ್ಲೆದೆಯ ಕನ್ನಡಿಗಳು! ಅದುವರೆಗೂ ನಾನು ನನ್ನ ಇಡೀ ಕೊಳೇಬರವನ್ನು ನಖಶಿಖಾಂತ ಒಟ್ಟಾಗಿ ಒಂದೇ ಕನ್ನಡಿಯಲ್ಲಿ

ಕಂಡಿರಲಿಲ್ಲ. ನಿಜಕ್ಕೂ, ನನ್ನ ಅವತಾರಕ್ಕೆ ಆ ಹುಡುಗಿ ಬೆಚ್ಚಿ ಬೀಳದಿದ್ದದ್ದು ಹೇಗೆ, ಅಂತ ನನಗೆ ಯೋಚನೆ ಹತ್ತಿತು. ಡಿಸ್‌ಮಿಸಾದ ಬಸ್ ಕಂಡಕ್ಟರ ನೊಬ್ಬ ತನ್ನ ಮೂರನೆಯ ಹೆಂಡತಿ ಅವುಳಿಜವುಳಿ ಹೆತ್ತಳು ಎಂಬ ಸುದ್ದಿ ಕೇಳಿದ ಕೂಡಲೇ ಹೇಗಿರುತ್ತಿದ್ದನೋ, ಹಾಗಿದ್ದೆ, ನಾನು ಆಗ !

ಇಂಚಿ ಪಟ್ಟಿ ಸಹಿತ ದರ್ಜಿಯವನು ಒಳಗೆ ಪ್ರವೇಶಿಸಿದ. ಅವನೆದುರು ನನ್ನ ಅವಲಕ್ಷಣದ ಉಡುಪನ್ನು ಹೊದ್ದು ನಿಲ್ಲುವುದೇ ನನಗೆ ಹೀನಾಮಾನವೆನಿಸಿತು. ಇನ್ನು ನನ್ನ ಒಳಗುಟ್ಟನ್ನು ಹೊರಗೆಡಹುವುದಂತೂ, ಸಾವಿರಪಾಲು ಶೋಚನೀಯ. ಅಲ್ಲೀ ತೂಗಾಡುತ್ತಿದ್ದ ಹೊಸ ಸೂಟುಗಳನ್ನು ನೋಡಿದಾಗ ನನಗೆ ನನ್ನ ವೇಷದ ಮೇಲೆ ದ್ವೇಷ ಹುಟ್ಟಿತು. ಮುಂದಿನ ಡೆಸ್ಕ್‌ಮೇಲೆ ಮೊಣಕೈ ಊರಿ ಊರಿ ಅಲ್ಲೆಲ್ಲ ತೂತು ! ವೈಗೆ ಕೈ ಅಂಟಿಸಿ ನಿಂತರೆ, ಅವು ಕಾಣಿಸುವುದಿಲ್ಲ, ಸರಿ ! ಆದರೆ, ಈಗ, ಈತ ನನ್ನನ್ನ ಸುಲಭದಲ್ಲಿ ಬಿಟ್ಟಾನೆಯೆ ? ಮುಂಗೈ ಅಳತೆಗಾಗಿ ಕೈಗಳನ್ನು ನೀಡಿಸಿ ಮಡಿಸಿ, ಅಲ್ಲಿ "ಗುಂಡಿ ಹೊಲೆಯ"ರಾದ ಹುಡುಗರ ಮುಂದೆ .... ಅಯ್ಯೋ ! ನಾನು ಭಯಪಟ್ಟಂತೆಯೇ ಆಯಿತು ! ಕೋಟಿಲ್ಲದ ಆ ಜಾಗಗಳನ್ನು ನೋಡುತ್ತಲೂ, ದರ್ಜಿಯ ಮುಖ ಜೋಲುಬಿತ್ತು ಕೇವಲ ಡೀ. ಸಿ.ಗಳ ಮಾನವನ್ನು ಮಾತ್ರ ಮುಚ್ಚುವ ಮಹಾಕಲಾವಿದನಾಗಿರಬೇಕು, ಆತ ! "ನಿಮಗೆ ಯಾಕ್ರಿ ಲಂಡನ್ ಕಟ್ಟು, ಸಿಂಗಪೂರ್ ಕಾಲರು, ಪಾರಿಸ್ ಪಾಕೆಟ್ಟು, ಷಾಂಗ್ಹಾಯಿ ಷರಾಯಿ, ಲಿನ್‌ಲಿತ್‌ಗೊ ಲೈನಿಂಗು, ಬೆವಿನ್ ಬಟ್ಟನ್ನು" ಎಂದು ಅವನು ನನಗೆ ಕೇಳಿಸದಂತೆ ಗೊಣಗುಟ್ಟಿರಬೇಕು ! ನನ್ನ ಅಂಗಿ ಬೆನ್ನನ್ನು ಮೇಲೆತ್ತಿ ಒಳಗಡೆ ಯಿಂದ ಟೇಪನ್ನು ಎದೆಗೆ ತಂದಾಗ, ಅರ್ಧವೆಲ್ಲ ಛಿದ್ರವಾಗಿದ್ದ ನನ್ನ ಕಾಟನ್ ಸ್ವೆಟರನ್ನು ಅತ ಪತ್ತೆ ಹಚ್ಚಿದ. ಅದು ನಮ್ಮಪ್ಪನದು. ಮುಂದೆ ಮಾತ್ರ ಬಿಗಿ ಯಾಗಿ ಕಾಣಲು ನಾನು ಅದನ್ನು ಹಿಂದೆ ಎಳೆದು ಪಿನ್ನು ಚುಚ್ಚಿದ್ದೆ. ಅವನು ನನ್ನ ಕೈಯಿಂದ ಅದನ್ನು ನಿರ್ದಾಕ್ಷಿಣ್ಯವಾಗಿ ಬಿಚ್ಚಿಸಿದ ! ಪಿನ್ನನ್ನು ಅವನೇ ಕಳಚಿದ. ಆಗ, ಅವನು ಕೆಮ್ಮಿದ್ದು, ಪ್ರಾಮಾಣಿಕತನದಿಂದಲ್ಲವೆಂದು ನನಗೆ ಅನ್ನಿಸಿತು.

ಸೊಂಟದ ಅಳತೆಗೆ ಬಂದಾಗ, ನಾನು ನಡುವಿಗೆ ಕಟ್ಟಿದ್ದ ಚಕ್ಕಳದ ಡಾಬು, ಸ್ಕ್ಯಾಟ್‌ನವರದು, ಬಕ್ಕಿಳ್ ಒಡೆದದ್ದು, ಅದನ್ನು ಕಂಡು ಇಬ್ಬರೂ ಏಕಕಾಲದಲ್ಲಿ ನಿಟ್ಟುಸಿರುಬಿಟ್ಟುವು. ಅದು ತೀರ ಅನಾಗರಿಕ, ಅಸಮಂಜಸ, ಅಸಂಬಂಧ, ಎಂದು ಇಬ್ಬರೂ ತುಟಿಬಿಗಿದು ಒಪ್ಪಿದುವು. ಡೋಬಿ ಪಾಲಾಗಿದ್ದ ಎರಡು ಗುಂಡಿ ಗಳ ಹಳೇಬೀಡುಗಳನ್ನು ನೋಡಿದಾಗ, ಅವನು ನಗು ತಡೆದದ್ದು ಸಾಹಸವೇ ಸರಿ.

ನನ್ನ ಹರಕಲು ಷರ್ಟಿಗೆ ಎಡಬಲಗಳಲ್ಲೂ ಕಿಸೆಗಳಿದ್ದದ್ದನ್ನು ಅವನು ಖಂಡಿ ಸಿದ. ಯುದ್ಧಾನಂತರದ ಷರ್ಟುಗಳಲ್ಲಿ ಕಿಸೆಗಳೇ ಇರಕೂಡದೆಂಬುದೇ ಪ್ಯಾರಿಸ್

ಬ್ರಹ್ಮಂದಿರ ಆಜ್ಞೆಯಂತೆ. ನಿಮಗೆ ಯಾವ ತರಹದ ಕಾಲರು ಇಷ್ಟ ! ಟೈಯಾವ ಬಣ್ಣದ್ದಾದರೆ ನಿಮಗೆ ಪ್ರೀತಿ ? ಮುಖಕ್ಕೆ ಎಂಥ ಪೌಡರ್ ಬಳಿಯುತ್ತೀರಿ ? ಎಂತೆಲ್ಲ ಕೇಳಿ ಅವನು ನನಗೆ ಬಹಳ ಹಿಂಸೆ ಕೊಟ್ಟ. ಉಗುರಿಗೆ ಬಣ್ಣ ಸವರುವ ಯೋಚನೆ ಉಂಟೆ ? ಎಂದ. ಏಕೆಂದರೆ, ಅವೆಲ್ಲಕ್ಕೂ ಅನುಗುಣವಾಗಿ, ಅಂಗಿ ಷರಾಯಿಗಳನ್ನು ಹೊಲೆಯಬೇಕೆಂಬುದೇ ಅವನು ಕಲಿತ ವಿದ್ಯೆಯ ಪ್ರಥಮಪಾಠ ವಂತೆ !

" ತುಂಬಾ ಹಳೇ ಷರಾಯಿ, ಸ್ವಾಮಿ !... ನೀವೇ ಒಗೆಯುತ್ತಿದೀರಿ ಅಂತ ಕಾಣುತ್ತೆ... ....ತಲೆದಿಂಬೇ ಇಸ್ತ್ರಿಮಾಡೋ ಮೆಷೀನೇನು ? " ಎಂದೆಲ್ಲ ಪೀಡಿಸಿದ.

ಆಮೇಲೆ, ನನ್ನ ಪಾದತಲದಲ್ಲಿ ಕುಳಿತ. ಬಲಗಾಲಿನ ಷರಾಯನ್ನು ತುಸು ಮೇಲಕ್ಕೆತ್ತಿದ. ಕಾಲುಚೀಲದ ಹಿಮ್ಮಡಿ-ತೂತು ಎಂಟಂಗುಲದ ಎತ್ತರ ಮೇಲಕ್ಕೂ ಹರಡಿದ್ದುದನ್ನು ಪತ್ತೆ ಹಚ್ಚಿದ. " ನಿಮ್ಮ ಊರು ಯಾವುದು ? ಕಾಕನಕೋಟೆ ಸಮೀಪವೋ ? " ಎಂದು ಕೇಳುತ್ತ, " ಕರು ಮಾಂಸಖಂಡ "ದ ಸುತ್ತಳತೆ ನೋಡಲು ಯತ್ನಿಸಿದ. ಆಗ, ಕಾಲುಚೀಲ ಕುಸಿದು ಬೀಳದ ಹಾಗೆ ನಾನು ಸ್ವದೇಶೀ ಗಾರ್ಟರಿನಂತೆ ಅಲ್ಲಿ ಸುತ್ತಿದ್ದ ಸೆಣಬಿನ ನಾರನ್ನು ಕಂಡು, ಆತ, ಬಲ ವಾಗಿ ಶೀನಿದ ! ತೊಡೆ ಸುತ್ತಳತೆಯನ್ನು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುವಾಗ, ಮತ್ತೊಂದು ಸಲ ಶೀತು, " ವಿಚಿತ್ರ ! " ಎಂದು ತನಗೆ ತಾನೇ ಹೇಳಿಕೊಂಡ. ಗುಂಡಿ ಹೊಲಿಗರೆಲ್ಲ ಗೊಳ್ಳನೆ ನಕ್ಕರು , ನಾನು ಕನ್ನಡಿಯೊಳಗಣ ಗಂಟನ್ನೇ ದಿಟ್ಟಿಸುತ್ತ ನಿಂತೆ.

ಆದರೆ, ಆತ ಒಳ್ಳೆ ಸಂಭಾವ್ಯವ್ಯಕ್ತಿ. ನನ್ನ ಕಾಡುತನ ಬಡತನ ಎರಡನ್ನೂ ಇಷ್ಟು ಮೂಲಂಕಷವಾಗಿ ಪರೀಕ್ಷಿಸಿ ತಿಳಿದುಕೊಂಡರೂ ಕೂಡ, ಆತ ನಯವಿನಯ ಗಳಿಂದ ನನ್ನನ್ನು ಮತ್ತೆ ಮಾತನಾಡಿಸಿದ. " ಗುಂಡಿಗಳೆಷ್ಟು ತಮಗೆ........ ಕೋಟಿಗೆ ? " ಎಂದ. ಅಲ್ಲಿ ಕುಳಿತು ಕಣ್ಣು ಹಾಳುಮಾಡಿಕೊಳ್ಳುತ್ತಿದ್ದ ಹಾಲು ಗಲ್ಲದ ಹಸುಗೂಸುಗಳನ್ನು ನೋಡಿದೆ. ಅವಕ್ಕೆ ಯಾಕೆ ಕಷ್ಟಕೊಡಬೇಕು, ಅನ್ನಿಸಿತು ! " ಎರಡು ಸಾಕು " ಎಂದೆ. ಅದಕ್ಕೆ ಆತ, ಹಾಕೋದಕ್ಕೇನೋ ಎರಡೇನೇ ! ಆದರೂ, ನಾಲ್ಕು ಇರಲಿ ! ಡೀ. ಸೀ. ಅಳಿಯನಿಗೆ ಐದು ಹಾಕಿ ದೇನೆ ; ನಿಮಗೆ ಅಷ್ಟು ಬೇಡ....ಒಂದು ಕಮ್ಮಿ ಇರಲಿ " ಎಂದ.

ಅಲ್ಲೇ ನಮ್ಮಪ್ಪ ನಿಂತಿದ್ದ. " ಎಷ್ಟೋ, ಗುಂಡಿಗಳಿಗೆ ಬೆಲೆ ? " ಎಂದ. " ಡಜನ್ ಹತ್ತು ರೂಪಾಯಿ " ಎಂದು, ಅವನು ಉತ್ತರ ಕೊಡುತ್ತಲೂ, ನಮ್ಮಪ್ಪ, " ಹಾಗಾದರೆ, ಡೀ. ಸೀ ಅಳಿಯನಿಗಿಂತ ಇವನು ಒಂದು ಮೆಟ್ಟಲುಮೇಲೇನೇ ಇರಲಿ ! ಅದರಿಂದ, ಅವರು ಸಿಟ್ಟುಗೊಂಡರೆ ಗೊಳ್ಳಲಿ....ಅರ್ಧ ಡಜನೇ ಹೊಲಿದು ಬಿಡು " ಅಂದರು. ನಾನು ತಲೆ ತಗ್ಗಿಸಿದೆ........ಅಂಗಡಿಯಿಂದ ಹೊರಬಂದೆ—

—ನಾ. ಕ.

ಉದರ

—o—

[ಗಾಂಧಿಜಿಗೆ ದೇಶಭಕ್ತ ಕೊಂಡಾ ವೆಂಕಟಪಯ್ಯ ಬರೆದ ಪತ್ರದ
ಆಧಾರದಮೇಲೆ]

ಸೇವಾಗ್ರಾಮದ ಮರಿಮನೆಯೊಂದದಲಿ
ಗಾಂಧಿವಿನೋಬಾ ಪಟಗಳ ತೂಗಿ,
ಗೀತೆಯಿಂದಲೆ ಬಹು ಶ್ಲೋಕಗಳುರು ಹಚ್ಚಿ
ವಂಚನೆಯಲಿ ಲಾಭ ಚಿಂತೆಮಾಡುವುದು .... ಉದರ

ಕರದಲಿ ಖದ್ದರು ಬಾಯಲಿ ಬಾಪುಜಿ
ಅರಿವೆಯ ಮುಸುಕನು ಅರಿವಿಗೆ ಹಾಕಿ
ನರಿ ಕುರಿ ವಿಧದಲಿ ಮಮಕಾರ ಬೆಳೆಸುತ
ಪರಮವೈರಾಗ್ಯ ಮೂರ್ತಿ ಎನಿಸುವುದು .... ಉದರ

ವೇದಿಕೆ ಮೇಲಿನಿಂದ ಗಡಬಡ ನುಡಿಯುತ
ಸತ್ಯ ಅಹಿಂಸೆಯ ದುಂದುಭಿ ಬಾರಿಸಿ
ಮದ ಮತ್ಸರ ಮೋಹ ಒಳಗೆ ತುಂಬಿಟ್ಟುಕೊಂಡು
ನಂಬಿದ ಮಂದಿಗೆ ನಾಮವ ತಿದ್ದುವ .... ಉದರ

ಓಟಿನಬೇಟೆಗೆ ಬಹಳ ಬೂಟಕಮಾಡಿ
ದಿಟನೀತ ಮೇಧಾವಿ, ಸಾಚ, ಎನಿಸಿ
ಹಲವರು ಟೋಪಿಯ ಬಯಲಡಂಬವ ತೋರಿ
ಊಟದ ಮಾರ್ಗವ ಹುಡುಕುವ ಮೋಷ .. ... ಉದರ
ವೈರಾಗ್ಯವಿದು.

—o—

ಧನಪಿಶಾಚಿ

ನಾಲ್ಕು ವರ್ಷಗಳಿಂದ ನಾನೇ ನಾನು ನಮ್ಮಪ್ಪ ಕಟ್ಟಿಸಿ ನನಗಾಗಿ ಬಿಟ್ಟು ಹೋದ ಬಸವನಗುಡಿ ಬಂಗಲೆಯಲ್ಲಿ ವಾಸವಾಗಿದೇನೆ. ದೊಡ್ಡ ಕಾಂಪೌಂಡು ; ಹೂವಿನ ತೋಟ ; ಸಂಪಿಗೆ ಮರ, ಉಯ್ಯಾಲೆ ; ಕಲ್ಲುಬೆಂಚು ; ನಾಯಿಗೊಂದು ಮರದಗೂಡು , ಒಳಗೆ, ಡ್ರಾಯಿಂಗ್ ರೂಮು, ರೀಡಿಂಗ್ ರೂಮು ; ಅವಳಿಗೊಂದು ಪ್ರತ್ಯೇಕ ದಿವಾನ್ ಖಾನೆ ...ಇತ್ಯಾದಿ ಇತ್ಯಾದಿ, ಸುಖ ಜೀವನ.

ಯಾವುದೋ ಒಂದು ಶನಿವಾರ, ಮಧ್ಯಾಹ್ನ ಕಳೆದು ಮೂರುಗಳಿಗೆಯಾಗಿದೆ. ಬಂದ ಮನೆಯೊಳಕ್ಕೆ ಒಬ್ಬ ಮದರಾಸಿನವ— ನನ್ನ ತಲೆಗೆ ಹುರುಪು ಹಿಡಿಸುವುದಕ್ಕೆ ! ಮುಂದಿನ ರೂಮೊಂದನ್ನು ತನಗೆ ಬಾಡಿಗೆಕೊಡುವುದಾದರೆ, ತಿಂಗಳಿಗೆ ೧೫ ರೂ. ಕೊಡುವುದಾಗಿ ಹೇಳಿದ. ನನಗೆ ಆಶ್ಚರ್ಯವಾಯಿತು. ಇಂಥ ದಡ್ಡರೂ ಮದರಾಸಿನಲ್ಲಿ ಅವತಾರಮಾಡುತ್ತಿದಾರಲ್ಲಾ, ಅಂತ ಹಿಗ್ಗಿದೆ. ಕೀಟಲೆಗೋಸ್ಕರ ೨೦ ಕೊಡಬೇಕು, ಮೂರು ತಿಂಗಳು ಅಡ್ವಾನ್ಸ್ ಸಹಿತ, ಎಂದೆ. ಅಲ್ಲೇ, ನಿಂತ ನಿಲುವಿನಲ್ಲೇ ಕಾಸೆಣಿಸಿದ.

ಅವನು ಬಂದ ಒಂದು ವಾರದೊಳಗೆ, ಮತ್ತೊಬ್ಬ ಬಂದ; ಆಚೆಕಡೆ ರೂಮು, ವರಾಂಡಾದ್ದು, ೨೫ಕ್ಕೆ ಕೊಡುತ್ತೀರಾ, ದಯವಿಟ್ಟು ? ಅಂದ. ಇಂಕ್ಕೆ ಒಪ್ಪಿ, ಕೃತಾರ್ಥನಾದೆ, ಎಂದು ಹೇಳುತ್ತ, ಅವನೂ ಕಾಸೆಣಿಸಿದ.

ಆ ಇಬ್ಬರ ಮಂಕುತನವನ್ನು ನೆನೆದು ನಾನೂ ಆವಳೂ ದಿನವೂ ನಗುತ್ತಿದ್ದೆವು. ಇಡೀಮನೆಗೆ ೫೦ ರೂ. ಬಾಡಿಗೆ ಸಿಗದು, ಅಂತ ನಾವು ಕೈಕೈ ಹಿಸುಕುತ್ತಿದ್ದ ಕಾಲವನ್ನೇ ನೆನೆದು, ನಮ್ಮ ಭಾಗ್ಯೋದಯಕ್ಕಾಗಿ ಹಿಗ್ಗಿದೆವು. ಮುಂದಿನ ತಿಂಗಳಲ್ಲಿ, ಮತ್ತೊಬ್ಬ ಬಂದ,....“ ತಮ್ಮ ಮನೆಯಲ್ಲಿ ಈ ಮುಂದಿನ ಹಾಲ್ ... ಡ್ರಾಯಿಂಗ್ ರೂಮು, ಅದನ್ನ ನಮ್ಮ ಕರ್ಮಸಮಾಜದ ಕಚೇರಿಗೆ ಬಾಡಿಗೆಕೊಟ್ಟು ಉಪಕಾರ ಮಾಡಬೇಕು, ಮಹಾಸ್ವಾಮಿ ! ” ಅಂದ ! ಕಾಸು ಕಿವಿಯಲ್ಲಿ ಕಿಲಕಿಲನೆ ನಕ್ಕಿತು. ಭಾಗ್ಯಲಕ್ಷ್ಮಿಯು ಕೈಬಳೆ ಸದ್ದು ಕೇಳಿಬಂತು. ನೂರು ರೂಪಾಯಿಗೇರಿ, ಅವನನ್ನ ಐವತ್ತಿಂದೆತ್ತಿ, ಎಂಬತ್ತಿಗಿಳಿದು, ಅವನನ್ನ ಎಪ್ಪತ್ತಕ್ಕಿಳಿದು, ಕಡೆಗೆ ೭೫ ಅಂತ ನಿರ್ಧರಮಾಡಿದೆ. ಅಲ್ಲಿಂದ ಮುಂದಕ್ಕೆ ನಾನು ಹಿತ್ತಲಬಾಗಿಲಿಂದಲೇ ಗೃಹಪ್ರವೇಶ ಮಾಡುತ್ತಿದ್ದದ್ದು. ಕೊಂಚ ನಾಚಿಕೆಗೇಡು ! ಆದರೂ, “ ಹಣವಾನ್ ಗುಣವಾನ್ ಲೋಕೆ, ಹಣಹೀನೋ ಹೆಣಾಧಮಃ ” ಎಂಬ ಸುಭಾಷಿತವನ್ನೇ ಸ್ಮರಿಸಿದೆ.

ಮುಂದಿನ ರೂಮುಗಳಲ್ಲಿ ಒಂದಕ್ಕೆ ೩೦, ಒಂದಕ್ಕೆ ೨೦ ಎಂಬ ತಾರತಮ್ಯ ನನ್ನ ಮನಸ್ಸಾಕ್ಷಿಗೆ ಸರಿಬೀಳಲಿಲ್ಲ. ನಾನಾರೀತಿಯ ಕೋಟಲೆಗಳಿಂದ, ೨೦ ರೂ. ಆಸಾಮಿಯನ್ನು ಓಡಿಸಿದೆ. ಅವನೂ ಶುದ್ಧ ಹೇಡಿ. ಸದ್ಯ : ಕೋರ್ಟುಗೀರ್ಟು ಹತ್ತಲಿಲ್ಲ.

ಅಷ್ಟರೊಳಗೆ, ಅವಳು ಒಂದು ಹೊಸ ಯೋಜನೆ ಹೂಡಿದಳು. ಗರಾಜಲ್ಲಿ ಮಂಡಿ ಎತ್ತರದ ಒಂದು ಅಡ್ಡಗೋಡೆ. ಮೊಣಕೈ ಎತ್ತರದಲ್ಲಿ ಒಂದು ಅಟ್ಟ ಕಟ್ಟಿಸಿ ಬಿಟ್ಟರೆ ಯಾರಾದರೂ ಬಡ ಮೇಷ್ಟರ ಸಂಸಾರ ವಾಸಕ್ಕೆ ಬರುತ್ತಾರೆ ; ೨೦, ೩೦, ಸಂತೋಷವಾಗಿ ಕೊಡುತ್ತಾರೆ, ಎಂದಳು. ನನಗೆ ಪಾಠ ಹೇಳಿದ್ದ ಮೇಷ್ಟರುಗಳಲ್ಲಿ ಹಲವರನ್ನು ನೆನೆಸಿಕೊಂಡೆ ಅಂಥವರಿಗೆ ನಮ್ಮ ಗರಾಜು ಸರಿಯಾದ ವಾಸಸ್ಥಳವೆನಿಸಿತು. ಅಡ್ಡಗೋಡೆಗಳೆದ್ದುವು ಈಗ, ಆ ಹಾಳು ಷೆಡ್ಡಿಂದ ತಿಂಗಳಿಗೆ ಮೂವತ್ತೆರಡೂವರೆ ಬರ್ತಾಯಿದೆ, ಸಲೀಸಾಗಿ ! ನಮ್ಮಪ್ಪನ ಕಾಲದಲ್ಲಿ, ಬೇಕಾದಾಗ ಇರಲಿ, ಅಂತ ಒಂದು ಬಾವಿ ತೋಡಿದ್ದರು. ಅದೀಗ ತುಂಬ ಅನುಕೂಲವಾಯಿತು, ಬಾಡಿಗೆ ಸಂಸಾರಗಳಿಗೆ.

ಮೆಯಿನ್ ಹೌಸಿನಲ್ಲಿದ್ದ ನನಗೂ, ಯಾಕೋ, ಜಾಗ ತುಂಬ ಖಾಲಿ ಅಂತ ತೋರ ಹತ್ತಿತು. ನಾವಿದ್ದದ್ದು ಐದು ಜನ. ನಮಗೇಕೆ ಅಷ್ಟು ಭಾರಿ ಸ್ನಾನದ ಮನೆ ? ಅದನ್ನೇ ಮತ್ತೊಂದು ಅಡಿಗೆಮನೆಯಾಗಿ ಮಾರ್ಪಡಿಸಿ, ದೇವರು ಮನೆಯನ್ನೇ ಎರಡು ಚಿಕ್ಕ ಚಿಕ್ಕ ಬಚ್ಚಲು ಮನೆಗಳಾಗಿ ವಿಂಗಡಿಸಿದರೆ, ಎರಡು ಸಂಸಾರಗಳು ಮೆಯಿನ್ ಹೌಸಿನಲ್ಲೇ ಸುಖವಾಗಿ ಇರಬಹುದಲ್ಲಾ, ಎಂದೆನಿಸಿತು ಅದಕ್ಕೆ ಅನುಕೂಲ ಅಮಾತ್ಯಗಿರಿ ಮಾಡುವ ಒಬ್ಬ ಕಂಟ್ರಾಕ್ಟರೂ ಗಂಟುಬಿದ್ದ ನನಗೆ ! ಡ್ರಾಯಿಂಗ್ ರೂಮಿನ ಎಡಭಾಗದ ಹಿಂದಿನ ಸಾಲಲ್ಲಿದ್ದ ಒಂದು ರೂಮು, ಅದರ ಪಕ್ಕದ ಊಟದ ಕೋಣೆ, ಅದರ ಪಕ್ಕದ ' ಹೊಸ ಅಡಿಗೆ ಮನೆ '— ಇದಿಷ್ಟಕ್ಕೂ ೫೦ ರೂ. ಬಂತು .. ಅಲ್ಲೇ ಅವರಿಗೆ, ಒಂದು ಕಿಟಕಿಯನ್ನೊಡೆದು, ಎರಡು ಬಾಗಿಲುಗಳನ್ನು ಮುಚ್ಚಿ ಪ್ರತ್ಯೇಕ ಮಾಡಿ ಕೊಟ್ಟುಬಿಟ್ಟೆ.

ಬಲಗಡೆ ಭಾಗ ನನಗೆ ಉಳಿದದ್ದು, ರೀಡಿಂಗ್‌ರೂಮು, ಅದರ ಪಕ್ಕದ ರೂಮು, ಉಗ್ರಾಣ, ದೇವರ ಮನೆಯ ಅರ್ಧಭಾಗ, ಅಡಿಗೆ ಮನೆ....ಅಷ್ಟರೊಳಗೆ ನನ್ನ ಬುದ್ಧಿ ಇನ್ನೂ ಚುರುಕಾಯಿತು. ಎರಡೇ ಎರಡು ರೂಮುಗಳಲ್ಲೇ ಎಂಟು ಹತ್ತು ಜನ ಇಹಲೋಕದ ಜೀವನವನ್ನು ನಿಭಾಯಿಸಬಲ್ಲವರಾಗಿರುವಾಗ, ನಾನು ಏಕೆ ಉಗ್ರಾಣ ಅಡಿಗೆಮನೆಗಳಲ್ಲಿ ಮಾತ್ರ ಇದ್ದು, ಇನ್ನೊಂದಿಷ್ಟು ಹಣ........? ಸರಿ ! ಕಿಟಕಿಯೊಡೆದು ಬಾಗಿಲು ಮುಚ್ಚಿ, ರೀಡಿಂಗ್‌ರೂಮನ್ನೂ ಅದರ ನೆರೆ ರೂಮನ್ನೂ ' ಬಾಡಿಗೆಗೆ ' ಎಂದು ಪ್ರಕಟಿಸಿದೆ. ಸಂಜೆ ಮನೆಮುಂದೆ ಒಂದು ಜಾತ್ರೇನೆ ಸೇರಿಬಿಟ್ಟಿತು. ೬೦ ರೂ ಅಂತ ಒಬ್ಬರನ್ನು ವರಿಸಿದೆ. ಉಳಿದವರ

ನ್ನೆಲ್ಲ ಆಚೆಕಳುಹಿಸಲು ಸ್ಪೆಷಲ್ ಪೋಲೀಸ್ ದಳವೊಂದು ಆಂಬುಲನ್ಸ್ ಸಹಿತವಾಗಿ ಬರಬೇಕಾಗಿ ಬಂತು.

ಹೀಗಾಗಿ, ನನ್ನ ಪಾಲಿಗೆ ಉಳಿದ ಜಾಗಕ್ಕೆ ನಾನು ಅಡಿಗೆಮನೆಯೊಳಗಿಂದಲೇ ಪ್ರವೇಶಿಸಬೇಕಾಗಿ ಬಂದಿದೆ. ಮೊನ್ನೆಯಿಂದ ಒಬ್ಬ ಉಗ್ರಾಣಕ್ಕೂ ಅಂಗಲಾಚುತ್ತಾ ಇದಾನೆ. ಪಾಪ! ಎಂಟು ತಿಂಗಳಿಂದ ವಾಸಕ್ಕೆ ಮನೆ ಇಲ್ಲದೆ ಒದ್ದಾಡುತ್ತಾ ಇದಾನಂತೆ. ಹೊಟ್ಟೆಯೆಲ್ಲ ಹೋಟಲ್‌ನೋವು ಷುರುವಾಗಿರುವುದರಿಂದ ಹೆಂಡತಿಯನ್ನು ಊರಿಂದ ಕರೆಸಿಕೊಂಡು ಹೊಸ ಸಂಸಾರ ಹೂಡಬೇಕಂತೆ. ಅವಳು, ಅವನ ತಾಯಿ, ಇಬ್ಬರೂ ಇಲ್ಲೇ ಇರುತ್ತಾರಂತೆ. ಇದ್ದಿಲೊಲೆ ಅಡಿಗೆ, ಕೆಂಪಾಂಬುಧಿಸ್ನಾನ, ಅಂತಾನೆ. ಉಗ್ರಾಣವನ್ನ ೧೫ ರೂ. ಬಾಡಿಗೆಗೆ ಕೊಡೋಣ ಅಂತಿದೇನೆ. . . . ನಾಳೆ ಬೆಳಗ್ಗೆ ಹೆಂಗಸರನ್ನೂ ಇತರ ಸಾಮಾನುಗಳನ್ನೂ ತಂದು ಬಿಡು ಅಂತ ಹೇಳಿದೇನೆ.

ನಮ್ಮ ಮನೆ ಅಡಿಗೆಮನೆ ಅಂಥ ಕಿಷ್ಕಿಂಧೆ ಏನೂ ಅಲ್ಲ. ಸ್ನಾನಕ್ಕೆ ಹೇಗಿದ್ದರೂ, ಬೇರೆ ಒಂದು ಕಟ್ಟಿಸಿದೇನೆ. ನಡುಮಧ್ಯ ಒಂದುಗೋಡೆ ಎಬ್ಬಿಸಿದರೆ, ಆಚೆ ಹುಡುಗರು ಓದಿಕೊಳ್ಳುತ್ತವೆ; ಬಿದ್ದುಕೊಳ್ಳುತ್ತವೆ; ಈಚೆ ಒಂದು ಕೈಗೋಡೆ ಕಟ್ಟಿಬಿಟ್ಟರೆ. ಆಚೆ ಅವಳು, ಈಚೆ, ನಾನು!

ಅಯ್ಯೋ! ನಿಜವಾಗಿಯೂ, ನಮಗೆ ಎಷ್ಟು ಜಾಗ ಬೇಕು? ಹದಿನಾಲ್ಕು ಲೋಕಗಳಿಗೂ ಒಡೆಯನಾದ ಆ ಮಹಾವಿಷ್ಣುವೇ ಒಂದು ಆಲದೆಲೆ ಮೇಲೆ .. ..?

— ಪಾಟಾಳಿ.

——o——

ಜುನಾಗಡದ ನವಾಬರು ತ್ಯಜಿಸಿಹೋದ ೪೫೦ ಜಾತಿ ನಾಯಿಗಳನ್ನು ಇಂಡಿಯಾ ಸರ್ಕಾರದವರು ಹರಾಜುಮಾಡುತ್ತಿದಾರೆ.... ಶ್ವಭ್ಯಃ ಶ್ವಪತಿಭ್ಯಶ್ಚ ನಮೋನಮಃ

* * *

"ಟರ್ಕಿ ದೇಶದಲ್ಲಿ ಮಹಿಳೆಯರೆಲ್ಲ ಬುರ್ಕಿ ತೆಗೆದು ಹೊರ ಬರುತ್ತಿರುವುದು ತೀರ ಅವಲಕ್ಷಣ; ಪಾಕಿಸ್ತಾನದಲ್ಲಿ ಪರದಾವನ್ನು ಪರಿಪಾಲಿಸಲೇ ಬೇಕು" (ಭಾಷಣ) ...ನಮ್ಮ ಸಂಪೂರ್ಣ ಒಪ್ಪಿಗೆ; ಸಂಪೂರ್ಣ ಒಪ್ಪಿಗೆ.

* * *

"ಕೆಲಸಗಾರರು ಮುಷ್ಕರ ಹೂಡುವಾಗ ಮಹಾಜನಗಳೂ ಅವರಿಗೆ ಸಹಾನುಭೂತಿ ತೋರಿಸಬೇಕು" (ಭಾಷಣ) ...ಹೌದು! ಮೊನ್ನೆ ಬಸ್‌ನವರೆಲ್ಲ ಮುಷ್ಕರ ಹೂಡಿದಾಗ, ಅನೇಕ ಮಹನೀಯರು ಕದಲಲೇ ಇಲ್ಲ.

* * *

ಸೆರಿಬ್ರಲ್ ಹೆಮ್ರೇಜ್

—o—

ನಾಣು ಖುದ್ ಸಿ. ಐ. ಡಿ. ಅಲ್ಲದಿದ್ದರೂ ಊರಲ್ಲೆಲ್ಲಾ ಖದೀಮನೆನಿಸಿಕೊಂಡಿದ್ದ. ಯಾವ ಖೂನಿಯಾಗಲೀ, ಗಲಾಟೆಯಾಗಲೀ ನಾಣೂದು ಒಂದು ಕೈ ಇದ್ದೇಯಿರೋದು ಅದ್ರಲ್ಲಿ....ಅಂದ್ರೇ ಇಂಥದ್ದನ್ನೆಲ್ಲಾ ಪತ್ತೇಹಚ್ಚೋದರಲ್ಲಿ. "ಊರಿನ ಸಮಾಚಾರವೆಲ್ಲ ಗೊತ್ತು ಅವನಿಗೇ''ಂತ ತಿಳ್ಕೊಂಡಿದ್ರು ಜನರೆಲ್ಲ. 'ಉದ್ಯೋಗಂ ಹರುಷ ಲಕ್ಷಣಂ' ಅನ್ನೋ ನಾಣ್ನುಡಿ (ನಾಣು ಹೇಳಿದ್ದು) ಅವನ ವಿಷಯದಲ್ಲಿ ತಪ್ಪು, ಯಾಕೇಂದ್ರೆ ಉದ್ಯೋಗ ಏನೂ ಇಲ್ಲದೆ ಇದ್ರೂ ಕುರಿ ಹಾಗೆ ಕೊಬ್ಬಿ ಕೋಳೀ ಹಾಗೆ ಖುಷಿಯಾಗಿರ್ತಾನೆ ಯಾವಾಗ಼್ಲೂ

ಮೊನ್ನೆ ಒಂದುದಿನ ಕಾಫೀ ಸಿಗರೇಟಿಗೆ ದುಡ್ಡಿಲ್ದೇ ಫಜೀತಿಯಾಗಿದೆಯಲ್ಲಾಂತಂದ್ಕೊಂಡು ಹಾಗೇ ಬೀದೀಗೆ ಇಳಿದಾಗ ಎದುರಿಗೆ ಜನೋಪಕಾರಿ ರಂಗಪ್ಪನವರು ಸಿಕ್ಕಿದರು. ಈತ ಮಹಾ ಜಿಪುಣನಾದರೂ ಜನಗಳ ವ್ಯಾಜ್ಯ ತೀರ್ಮಾನದಲ್ಲಿ ಪುಂಡರನ್ನ ಪೋಲೀಸ್ ಹವಾಲೆ ಮಾಡೋದರಲ್ಲಿ ಆಸಕ್ತಿಯುಳ್ಳವ.

"ಏನಯ್ಯ ನಾಣೂ ಏನ್ ಸಮಾಚಾರ''? ಅಂದರು ರಂಗಪ್ಪನವರು.

"ಏನೂ ಇಲ್ಲ ಸಾರ್ ಎಲ್ಲ ನಿಮ್ಮ ದಯ....'

"ಹ್ಯಾಗಿದೆ ಪಕ್ಕೆನೋವೂ?''

"ಹಾಗೇ ಇದೇಸಾರ್........ ನೋಡಿದಿರಾ. ಪಕ್ಕೆನೋವೂಂದಕೂಡ಼್ಲೆ ಗ್ಯಾಪ್ಕಕ್ಕೆ ಬಂತು ನೋಡಿ. ಈಗ ಒಂದು ಏಳೆಂಟು ದಿನದಿಂದ ಈಕಡೆ ಒಬ್ಬ ನಾಟಿ ವೈದ್ಯ ವಕ್ಕರಿಸಿದ್ದಾನೆ ಗೊತ್ತೊ?''

"ಇಲ್ಲವಲ್ಲ ...... ಏನು ವಿಷಯ?''

"ವಿಷಯವೇ? ಬಡಬಗ್ಗರನ್ನೆಲ್ಲಾ ಬಡ್ದು ಕಾಸು ತಿನ್ತಾ ಇದಾನಲ್ಲ ಸಾರ್, ಹಳ್ಳಿ ಹಳ್ಳೀಗೂ ಹೋಗಿ. ಮೂರು ದಿನದಿಂದ ಅವನಿಗೆ ಗೊತ್ತಿಲ್ದೇ ಅವನಹಿಂದೇ ಹೋದೆ ನಾನೂನು. ತಾನು ಭಾರೀಪಂಡಿತ ಅಂತ ಬಿರುದು ಬಾವಲಿ ತೋರಿಸಿ, ನಾಡೀ ಹಿಡಿದು ಇಲ್ದೇ ಇದ್ದ ಕಾಯಿಲೆಯೆಲ್ಲಾ ಹೇಳಿ – ಅದೇನೋ "ಮಡಿ ಔಷಧಿ''ಯಂತೆ—ಕೊಟ್ಟು, ಸಿಕ್ಕಾಪಟ್ಟೆ ದುಡ್ಡು ದರೋಡೆ ಮಾಡ್ತಾ ಇದಾನೆ. ಏನು ಮಾಡೋದು?"

" ಸರಿ ಹಾಗಾದರೆ. ಎಲ್ಲಿದಾನೆ ಅವನು ? ''

" ಇಲ್ಲೇ ಫಣಿಯಪ್ಪನ ಹೋಟೆಲಿನಲ್ಲಿ ಇಳ್ಕೊಂಡಿದಾನೆ.''

" ಹಾಗಾದ್ರೆ ಮಧ್ಯಾಹ್ನ ನಮ್ಮನೇಗೆ ಕರ್ಕೊಂಬಾ. ಮಲ್ಗಿರ್ತೀನಿ ' ಯಾವುದೋ ಭಾರೀ ಖಾಯಿಲೆ ರಂಗಪ್ನೋರಿಗೆ.... ನಿಮ್ಮಂತಹವರು ಊರಿಗೆ ಬಂದಿರೋವಾಗ ಆಸ್ಪತ್ರೆಯಾಕೇ'ಂತ ಪುಸ್ಲಾಯಿಸಿ ಎಳ್ಕೊಂಬಾ ಮಾಡೋಣ ಆಮೇಲೆ " ಎಂದು ರಂಗಪ್ಪನವರು ನಾಣೂಗೆ ಪ್ಲ್ಯಾನ್ ಎಲ್ಲಾ ಹೇಳಿದರು. ಹಾಗೇ ಆಗಲಿ ಎಂದು ಹೊರಟ.

ಮಧ್ಯಾಹ್ನ ೪ ಗಂಟೆಗೆ ಹಾಜರು ನಾಣೂ ವೈದ್ಯ ಸಮೇತ. ' ರಂಗಪ್ಪನವರೇ ' ಎಂದ. ಯಾರೋ ಬಾಗಿಲು ತೆರೆದರು. ' ಒಳಕ್ಕೆ ದಯಮಾಡಿಸಿ ' ಅಂತ ಆಹ್ವಾನ ಬಂತು. ರಂಗಪ್ಪನವರು ಮಂಚ ಹಿಡಿದು ಮಂಕು ಮುಖ ಹಾಕಿಕೊಂಡು ಮಲಗಿದ್ದರು, ಪ್ಲ್ಯಾನ್ ಪ್ರಕಾರ. ನಾಣುವಿನ ಮೂಲಕ ವೈದ್ಯರ ಪ್ರಶಂಸೆ ನಡೆದ ನಂತರ ರಂಗಪ್ಪನವರು ನೇಟಿವ್ ನಂಜಪ್ಪನ ಕಡೆ ನಾಡೀ ನೀಡಿದರು. ನಂಜಪ್ಪ ನಾಡಿ ಹಿಡಿದ. ತಲೆಯೆತ್ತಿ ಒಂದುಸಾರಿ ಹೊಗೇ ಕಂಡಿ ನೋಡಿದ. ಹುಬ್ಬುಗಳ ಹಾವಭಾವ ಬದಲಾಯಿಸಿತು. ತುಟಿಗಳೂ ಸಹಕರಿಸಿ " ತ್ಚು" ಎಂಬೊಂದು ಕಿರುಸಿಂಪತಿಯನ್ನು ಹೊರಗೆಡಹಿದುವು.

" ಎಷ್ಟುದಿನದಿಂದ ? '' ವೈದ್ಯನ ದನಿಯಲ್ಲಿ, ಯೋಚನೆ, ಕರುಣೆಗಳ ಕಾರಂಜಿ ಚಿಮ್ಮುವಂತಿತ್ತು.

" ಕಾಹಿಲೆಯೇನೋ ಹಳೆಯದೇ. ಇಷ್ಟು ದಿವಸ ಏನೂ ಇರಲಿಲ್ಲ. ನೆನ್ನೆಯಿಂದ ಮರುಕಳಿಸಿದೆ ನೋಡಿ ಹಾಳಾದ್ದು.'' ಮುಖಕ್ಕೆ ಕಾಹಿಲೆ ಕಳೆ ತಂದುಕೊಂಡು ನುಡಿದರು ರಂಗಪ್ಪನವರು.

" ನಿಮ್ಮ ಇಂಗ್ಲೀಷಿನಲ್ಲೇನೋ ಇದಕ್ಕೆ ಸೆರಿಬ್ರಲ್ ಹೆಮರೇಜೋಂತಲೋ ಏನೋ ಹೇಳ್ತಾರೆ ಅಂತ ಕಾಣುತ್ತೆ. ನಾವೇನೋ " ಶಿರಚ್ಛೇದಿ " ಅಂತೀವೆ ಇದಕ್ಕೆ '' ವೈದ್ಯನ ಮುಖಮುದ್ರೆ ಬದಲಿತು

" ಹಾಗಾದರೆ ಹೊಟ್ಟೆಯೇಕೆ ನೋಯಬೇಕು ? '' ರಂಗಪ್ಪನವರ ಕುಹಕ ಪ್ರಶ್ನೆ.

" ಹೊಟ್ಟೆ ಏನುಸ್ವಾಮಿ ?........ಕಾಲಿನ ಕಿರುಬೆರಳು ಊದಿಕೊಂಡರೂ ಅದು ಈ ಕಾಹಿಲೆಗೆ ಚಿನ್ಹೆಯೇ. ಬಹಳ ಕಿಲಾಡಿ ಕಾಯಿಲೆ ಇದು. ಆದರೆ ನೀವೇನೂ ಗಾಬರಿ ಬೀಳಬೇಡಿ. ಈಗ ಸದ್ಯಕ್ಕೆ ಒಂದು ಚೂರ್ಣ ಕೊಡುತ್ತೇನೆ '' ಎಂದು ಪೆಟ್ಟಿಗೆ ತೆಗೆದ.

" ರಾತ್ರೀ........ಊಟ........? '' ಎಂದರು ರಾಯರು.

" ಕೊಂಚ ಬೇಕಾದರೆ ಊಟಮಾಡಿ ತಿಳಿಸಾರಿನಲ್ಲಿ ಸಾಯಂಕಾಲ ಒಂದು ಘೃತ ತಯಾರುಮಾಡಿ ಕಳಿಸುತ್ತೇನೆ. ಹಾಲಿನಲ್ಲಿ ತೆಗೆದುಕೊಳ್ಳಿ. "

" ಆಗಬಹುದು "

" ನಂತರ ನೋಡೋಣ ... ..ಇದರ ಪ್ರತಿಕ್ರಿಯೆ ನೋಡಿಕೊಂಡು ...ಒಂದು ಲೇಹ್ಯ ಬೇಕಾದರೆ ಭಟ್ಟಿ ಇಳಿಸಿ ಕೊಡೋಣವಂತೆ...."

" ಆಗಬಹುದು....ಏನೋ ಎಲ್ಲಾ ನಿಮ್ಮ ಕೈಯಲ್ಲಿದೆ. ಈ ಪೂರ್ಣ ಚಿಕಿತ್ಸೇದೆಲ್ಲಾ ಎಷ್ಟು ಆಗಬಹುದು ಅಂತ ಅಪ್ಪಣೆಕೊಡಿಸಿದರೆ ....? "

" ಕನಿಷ್ಠ ಅಂದ್ರೆ ೪೨ ದಿನವಾದರೂ ಚಿಕಿತ್ಸೆಪಡೆಯಬೇಕೂ ನೀವು... ನಾನು ಅದೇನೋ ಹೇಳೋ ಹಾಗೆ ಖಡಾಖಂಡಿತದ ಮನುಷ್ಯ.... ೧೫೦ ರೂಪಾಯಿ ಆಗುತ್ತೇ ಬರೀ ಔಷಧ ಖರ್ಚೇ ....ಅದೆಲ್ಲಾ ಆಮೇಲೆ ಮಾತಾಡೋಣಂತೆ ಈಗ್ಯಾಕೆ....?....ಕೊಂಚ ಹೆಚ್ಚೂಕಮ್ಮಿ.... ..."

" ಅಷ್ಟಲ್ದೇ ಏನುಬಿಡಿ. ನೂರಲ್ದೇ ಇದ್ರೆ ಇನ್ನೂರಾಗ್ಲೇಳಿ. ಸದ್ಯ ನಿಮ್ಮ ಹಸ್ತಗುಣದಿಂದ........ಹ ಹ ಹ !........ಈಗ ಸದ್ಯಕ್ಕೇನಾದ್ರೂ ಹಣ ಬೇಕಾಗ ಬಹುದು ನಿಮ್ಮ ಔಷಧಿ ಖರ್ಚಿಗೆ ? "

" ಸದ್ಯ ಬೇಕಾದ್ರೆ ಒಂದೈವತ್ತು ಕೊಟ್ಟಿರಿ "

" ಅಯ್ಯೋ ಅದಕ್ಕೇನಂತೆ " ಎನ್ನುತ್ತಾ ದಿಂಬಿನ ಕೆಳಗಿನಿಂದ ೫ ನೋಟ್ಸು ತೆಗೆದು ನಂಜಪ್ಪನ ಕೈಗಿಟ್ಟರು ರಂಗಪ್ಪನವರು. ನಂಜಪ್ಪ ಇಷ್ಟಾದರೂ ತನ್ನ ಬಿಗಿ ಬಿಡದೆ ಎರಡು ಉಪಚಾರದ ಮಾತಾಡಿದ ತಾನು ದಿನವು ಒರುವುದಾಗಿ ಹೇಳುತ್ತಾ,

" ಹಾಗಾದರೆ ನಾನಿನ್ನು ಬರಲೇ ? " ಎಂದು ಅಪ್ಪಣೆಪಡೆದು ಬಾಗಿಲು ತನಕ ಹೋದನೋ ಇಲ್ಲವೋ ಈಕಡೆಯಿಂದ ರಂಗಪ್ಪನವರು ಆಕಡೆಯಿಂದ ನಾಣೂ ಅಮುರಿಕೊಂಡರು.

" ಎಲಾ ಕೇಡಿ ! ಎಷ್ಟುದಿನದಿಂದ ಹೀಗೆ ಹಳ್ಳೀ ಬಡವರ ದುಡ್ಡೆಲ್ಲಾ ಲೂಟಿಮಾಡುತ್ತಿದ್ದೀಯೋ ? "

" ಹಳ್ಳೀ ಗೂಶ್ಲೂಗಳೂಂತ ತಿಳ್ಕೊಂಡು ನಮ್ಮಂತಹ ಕಿಲಾಡಿಗಳ ನಾಡಿ ಹಿಡಿಯೋಕ್ಬರ್ತೀಯೋ ? ವಹಾರೇವ್ಹಾ !

" ಇದ್ಯಾವೂರು ಗೊತ್ತಿದೆಯಲ್ಲಾ ! ಏನು ಪುಂಗನೂರಿಗೆ ಕೆಟ್ಹೋಯ್ತೂಂತ ತಿಳ್ಕೊಂಡೆಯೋ ? ತಯಾರಾಗು ಪೋಲೀಸ್ ಸ್ಟೇಷನ್ಗೆ. ನಾಣೂ ಇವನ್ನ ಹಿಡ್ಕೊಂಡ್ಹೋಗಿ ಪೋಲೀಸ್ ಸ್ಟೇಷನ್ಗೆ ಹಾಕ್ಸಿ, ಇನ್ಸ್ಪೆಕ್ಟರ ಎದುರಿಗೇ ಜೇಬು ಝಡ್ತೀಮಾಡ್ಸಿ, ನನ್ ರುಜುಹಾಕಿ ಇವತ್ತಿನ ತಾರೀಖು ಹಾಕಿರೋ ೫ ನೋಟು

ಗಳನ್ನೂ ರುಜುವಾತ್ಮಾಡಿಸಿ, ಇವನ ನಾಡೀಗೆ ಕೋಳ ಹಾಕ್ಸಿ ಲಾಕಪ್ಪಿನಲ್ಲಿ ಬಿಟ್ಟ್ಟ ಲಾಡೂ ತಿನ್ಸು ಎರಡು .. ನಾನೂ ಬರ್ತೀನಿ ಡ್ರೆಸ್‌ಮಾಡ್ಕೊಂಡು ವ್ಹಾರೇವ್ಹಾ ! ಸೆರಿಬ್ರಲ್ ಹೆಮರೇಜ್ ಅಂತೆ ಇವನ ಪಿಂ.... ..."


"ಬಾವ್ಹಾ ಬಾ.... ಇಪ್ಪತ್ತದಿನ ರೋಪ್ ಹಾಕ್ಕೊಂಡು ವೈದ್ಯನ ವೇಷ ಹಾಕ್ಕೊಂಡು ದರೋಡೆ ಹೊಡೆದ ಹಾಗಲ್ಲ .." ಎನ್ನುತ್ತಾ ನಂಜಪ್ಪನ ಕೈಹಿಡಿದು ನಾಣೂ ಹೊರಟದ್ದ. ಹಿಗ್ಗಿದ ಮನಸ್ಸಿನಿಂದ ರಂಗಪ್ಪನವರು ಮೀಸೆ ತೀಡುತ್ತಾ ಕೈಕೊಡವಿಕೊಂಡು ಬಾಗಿಲು ಹಾಕುವಷ್ಟರಲ್ಲೇ, ..

"ಅಯ್ಯೋ ತಪ್ಪಿಸಿಕೊಂಡ ... ಹಿಡೀರಿ – ಬಿಡಬೇಡಿ" ಅಂತ ನಾಣೂ ಕೂಗಿದ ಶಬ್ದ ಕೇಳಿಸಿತು ರಂಗಪ್ಪನವರು ಗಾಬರಿಯಿಂದ ಬಾಗಿಲು ತೆಗೆದರು. ನಂಜಪ್ಪ ಓಡುತ್ತಾ ಎದುರು ಗಲ್ಲಿಬಿದ್ದ ರಾಯರೂ ಕೋಟು ತಗುಲಿಸಿಕೊಂಡು ಕಚ್ಚೆ ಸರಿಮಾಡಿಕೊಂಡರು. ಇತ್ತಕಡೆ ನಾಣೂ ಪಕ್ಕದ ಗಲ್ಲಿಯ ಮೂಲಕ ಓಡಿದ ಊರ ಹೊರಭಾಗದಲ್ಲಿ ದೊಡ್ಡ ಹಿಂದುಗಡೆ ನಂಜಪ್ಪ ಸಿಕ್ಕಿಬಿದ್ದ ನಾಣೂಗೆ.

"ಈ ಘಟದ ಹತ್ತಿರ ಜಂಗಿಟ್ಟಿದ್ದು ಆಶ್ಚರ್ಯವೇ....ಹೋಗಲಿ ಬೆಂಗಳೂರಿಗೆ ಹೋಗಿ ಒಂದು ವಾರ ಮಜಾ ಮಾಡೋಣ" ಅಂತ ಇಬ್ಬರೂ ಮಾತಾಡಿಕೊಂಡು ರೈಲುಸ್ಟೇಷನ್ ದಾರಿಹಿಡಿದರು.

[ಓ ಹೆನ್ರಿವಾಸನೆ ಹೊಡೆಯುತ್ತಲ್ವೇ ಕೊಂಚ ?]

—ಟೀಯಸ್ಸಾರ್‌ಪ್ರಾಶ್.



ಗೊಬ್ಬರ ತುಂಬಿದ ಸೈಟುಗಳಲ್ಲಿ ಮನೆ ಕೂಡ ಬೇಗ ಬೆಳೆಯುತ್ತೇನೋ.

ಇಂಡ್ಯ


ಇಂಡ್ಯ ಎಲ್ಲಿದೆ ?
ಇಂಡ್ಯ ಎಲ್ಲಿದೆ ?
ಅಂಗ ಚೋಳ ವರ ಕಳಿಂಗ
ಹರ್ಷ ವಿಷ್ಣು ಕೃಷ್ಣರಾಯ
ತಾಜಮಹಲ
ಗಂಗ ತುಂಗ
ಮಿರುಮಿರುಗುವ ಕಟ್ಟುಕತೆಯ
ರೊಟ್ಟೆನೊಳಗೆ ಚಿತ್ರದಲ್ಲಿ
ಇಂಡ್ಯ ಇಲ್ಲ ;
ಇಂಡ್ಯ ಇಲ್ಲ.

ಇಂಡ್ಯ ಎಲ್ಲಿದೆ ?
ಇಂಡ್ಯ ಎಲ್ಲಿದೆ ?
ಮುಸಲ ಸುಖವೆ ಸುಖವು ಎನಗೆ
ಎನುತ ಭೀಷ್ಮ ಕರಗಿ ಬಾಡಿ
ನಗುತ ಮರಣದತ್ತ ಸರಿದ
ಗಾಂಧಿ ಇರುವ ಬಿರ್ಲ ಮನೆಯ
ಹೊಕ್ಕು ನೋಡು, ನಮಿಸು ಬಾಗು,
ಇಂಡ್ಯ ಅಲ್ಲಿದೆ;
ಇಂಡ್ಯ ಅಲ್ಲಿದೆ.

* * *

ಇಂಡ್ಯ ಎಲ್ಲಿದೆ ?
ಇಂಡ್ಯ ಎಲ್ಲಿದೆ ?
ಹೂಣಧಾಳಿ ಬರಲು ದುಡುಕಿ
ಉಳಿಸು ಅಕ್ಕಾ ಎಂದು ಹಲುಬಿ
ಬಂದ ಕಾಶ್ಮೀರ ಜನರಿ
ಗಭಯಕೊಟ್ಟು ಅವರಿಗಾಗಿ
ಸ್ವಾರ್ಥಲೇಶವಿಲ್ಲದಲೆ
ರಕ್ತ ಚೆಲ್ಲುವಲ್ಲಿ, ನೋಡು,
ಇಂಡ್ಯ, ಅಲ್ಲಿದೆ ;
ಇಂಡ್ಯ ಅಲ್ಲಿದೆ.

ಇಂಡ್ಯ ಎಲ್ಲಿದೆ ?
ಇಂಡ್ಯ ಎಲ್ಲಿದೆ ?
ಸಿಂಧಿ ಬರಲು ಕೈಯ ಚಾಚಿ
ಪಂಜಾಬಿಯ ತಬ್ಬಿ ಬಾಚಿ,
ಸ್ವಾರ್ಥತೆಯನೆ ತೇಲಿಬಿಟ್ಟು
ಉಡಲು ಉಣಲು ಎಲ್ಲ ಕೊಟ್ಟು
ಅವರ ಬಾಳ ಬೆಳಗಿ ಕೊಟ್ಟು
ಅಣ್ಣಾ, ತಮ್ಮಾ, ಎನ್ನುವಾಗ,
ಇಂಡ್ಯ ಅಲ್ಲಿದೆ ;
ಇಂಡ್ಯ ಅಲ್ಲಿದೆ.



ಲೇಕ್ ಸಕ್ಸಸ್‌ನಿಂದ

ನೀತಿ ಹೇಳುಕ್ಕೆ ಆತನ್ನ ಕರೆಸಿದರೆ ಆತ ನನಗರ್ಧ ಬೇಕು ಅಂದನಂತೆ —

* * *

ತೋಳ! ತೋಳ! ಕಾಶ್ಮೀರ್ ಕಾಯ್ತಿಯಾ ಅಂದರೆ —ಓಹೋ! ಸಂಬಳವಿಲ್ಲದ! ಅಂತಂತೆ.

* * *

ರಾತ್ರಿಯೆಲ್ಲಾ ಹೇಳಿದ್ದೆಲ್ಲಾ ಕೇಳಿ, ಬೆಳಗಾಗುತ್ತಲೂ ಅಂದನಂತೆ— ಭಾರತ ಪಾಕಿಸ್ಥಾನ ಸಮಸ್ಯೆ ಯಾವುದು? ಅಂತ.

* * *

ಕೇಳೋರೆಲ್ಲಾ ಕಿವುಡೇ ಆದರೆ ಹೇಳೋರೆಲ್ಲಾ ಹೆಡ್ಡರೇ ದಿಟ!

* * *

ದೂರಕ್ಕೆ 'ಯೂ'ನೋ—ಧರ್ಮಕ್ಕೇನೇ!
—ಹತ್ತಿರ ಹೋದರೆ ನುಣ್ಣಗೇನೇ?

* * *

ಅಧ್ಯಕ್ಷ ಆಡೋದನ್ನೆಲ್ಲಾ ಕೇಳಿದರೆ.
ಯಾವು ಅಧ್ಯಕ್ಷ—ಜಫರುಲ್ಲಾ ಖಾನನೋ—
ನೋಎಲ್ ಬೇಕರೋ? ಎನ್ನಿಸುತ್ತೆ.

* * *

ಸಾವಿರ ಸುಳ್ಳುಹೇಳಿ, ಒಂದು ಕಾಶ್ಮೀರ ಹೊಡಿ.

* * *


ಅಪ್ಪ ಬ್ರಿಟನ್ನಿನೊಡನೆ ಊಟಮಾಡಿದರೂ ಒಂದೇ.
ಅಮ್ಮ ಯೂಎನ್‌ಓ ಹತ್ತಿರ ಉಂಡರೂ ಒಂದೇ.

* * *

ಕಾಶ್ಮೀರ ಪುರವಾಸಿನಿ ಆ 'ಸರಸ್ವತಿ' ಏನಾದಳೋ ಎಲ್ಲಿ ಹೋದಳೋ ಪಾಪ.

* * *

ಅಧ್ಯಕ್ಷ ಲಂಗಿನ್ಹಾಫ್‌ಗೆ— ಲಂಗೂ ಇಲ್ಲ ಲಗಾಮೂ ಇಲ್ಲವಂತೆ.



ಗಾಣದ ಎತ್ತುಗಳು

‘ಅರಬ್ಬೊಬ್ಬ’ ಅಥವಾ ‘ಕದನ ಕಹಳೆ’

ಇಂದಾನೊಂದು ಕಾಲದಲ್ಲಿ ಶಸ್ತ್ರಧಾರೀ ಅರಬ್ಬನೊಬ್ಬನು ದಾರಿಯಲ್ಲಿ ಹೋಗುತ್ತಿದ್ದ. ಜನಿವಾರ ಹಾಕಿಕೊಂಡ ಹಾಗೆ ಒಂದು ಕೋವಿಯನ್ನು ಧರಿಸಿದ್ದ. ಉಡಿದಾರಕ್ಕೆ ಒಂದು ದೊಡ್ಡ ಕತ್ತಿಯನ್ನು ತೂಗುಬಿಟ್ಟಿದ್ದ, ಸೊಂಟಕ್ಕೆ ಒಂದು ಚಾಕುವನ್ನು ಸಿಕ್ಕಿಸಿದ್ದ. ಬೈಸಿಕಲ್ ಸವಾರಿ ಮಾಡ್ತಾ ಬರ್ತಿದ್ದ.

ಹಗಲು ಹತ್ತುಗಂಟೆ ಸಮಯ. ಹದಿನಾರು - ಹದಿನೇಳು ವಯಸ್ಸಿನ ಹುಡುಗನೊಬ್ಬ ಕಾಲೇಜಿಗೆ ರಾಜಬೀದೀಲಿ ಹೋಗುತ್ತಿದ್ದ. ಅವತ್ತು ಒಪ್ಪಿಸಬೇಕಾದ ತೆಲುಗು ಪಾಠ ಜ್ಞಾಪಿಸಿಕೊಳ್ಳುತ್ತಾ ಹೋಗುತ್ತಿದ್ದ.

ಅರಬ್ಬ, ಹುಡುಗನ ತೋಳಮೇಲೆ ಕೈಹಾಕಿ, “ಪೈಸಾದೇವ್ ’ ಅಂದ. ಹುಡುಗ ‘ನಾ ದಗ್ರ ಏದಿ ? ’ ಎಂದ. ಆವೇಳೆಗೆ ಅರಬ್ಬ ಹುಡುಗನ ಜೇಬಿಗೆ ಕೈಹಾಕಿ, ಕಾಲೇಜ್ ಫೀಜಿಗೆಂದಿದ್ದ ಐದು ರೂಪಾಯಿ ಗಿಟ್ಟಿಸಿದ. ಹುಡುಗ ಎಲ್ಲಾದರೂ ಬೊಬ್ಬೆ 'ಇಟ್ಟಾನು' ಎಂದು ಅರಬ್ಬ ಅವನನ್ನು ಹೆದರಿಸಲು ಸೊಂಟದಿಂದ ಚಾಕು ಹಿರಿದು ಹೆದರಿಸ ಹೋದ.

ಹುಡುಗನಿಗೆ ಚಾಕುಮೇಲೆ ಕಣ್ಣು. ಅದಕ್ಕೆ ಕೈಹಾಕಿದನೋ ಅಲ್ಲವೋ, ಆಗಲೇ ಅರಬ್ಬನ ಕೈ ಹಿಡಿದುಕೊಳ್ಳಲು ಯತ್ನಿಸಿದ. ಹಾಗೂ “ಅಯ್ಯಯ್ಯೋ ’’ ಎಂದು ಕದನ ಕಹಳೆಯನ್ನು ಊದಿದ.

ತನ್ನ ಕೈ ಹಿಡಿಯುವಷ್ಟು ಧೈರ್ಯ ಹುಡುಗನಿಗೆ ಎಲ್ಲಿ ಬಂತು ಎಂದು ಅರಬ್ಬನ ನಂಬಿಕೆ. ಹಾಗಾಗಿ ಆ ಚಾಕುವಿನ ಹಿಡಿ ಅವನ ಇನ್ನೊಂದು ಕೈಗೆ ತಾಕಿ ಸ್ವಲ್ಪ ಗಾಯವಾಯಿತು. ಈ “ಕದನ ಕಹಳೆ ’’ ಕೇಳಿದ ಹಾದಿಯಲ್ಲಿ ಹೋಗುತ್ತಿದ್ದ ನಾಲ್ಕಾರು ಬೋಯಿಗಳು ಸಹಾಯಕ್ಕೆ ಬಂದರು. ಅರಬ್ಬನನ್ನು ಹಿಡಿದರು ; ಪೋಲಿಸ್ ಠಾಣೆಗೆ ಒಯ್ದರು. ಹುಡುಗ ತನಗಾದುದನ್ನು ಹೇಳಿದ. ಬೋಯಿಗಳೆಲ್ಲಾ ಸಾಕ್ಷ್ಯ ಇತ್ತರು.

ಪೋಲೀಸಿನವರು ‘ಕೇಸ್ ’ ದಾಖಲ್ ಮಾಡಿ ಫಿರ್ಯಾದು ಹೂಡಿದರು. ಏನಂತ ಗೊತ್ತೆ ?

ಶಾಂತಿಪಾಲಕ ಅರಬ್ಬನು ಏಕಾಂಗಿಯಾಗಿ ಹಾದಿಯಲ್ಲಿ ನಮಾಜಿಗೆಂದು ಹೋಗುತ್ತಿದ್ದ. ಈ ಹುಡುಗನ ಮುಖಂಡತ್ವದಲ್ಲಿ ನಾಲ್ವಾರು ಹಿಂದೂ ಗೂಂಡಾಗಳು ಇವನನ್ನು ಹಿಡಿದು ಕೈ ಗಾಯಗೊಳಿಸಿ, ಇವನ ಕೋವಿ, ಕತ್ತಿಯನ್ನು ಅಪಹರಿಸಲು ಯತ್ನಿಸಿದರು. ದೇವರನ್ನೇ ನಂಬಿದ ಅರಬ್ಬನು ಧೈರ್ಯದಿಂದ ಹೋರಾಡಿ ಇವರೆಲ್ಲರನ್ನೂ ಠಾಣೆಗೆ ತಂದೊಯ್ದ. ಆದ್ದರಿಂದ ಈ ಹುಡುಗನಿಗೆ, ಅನುಪಮ ಶಿಕ್ಷೆ ವಿಧಿಸಿ, ಇನ್ನುಮುಂದೆ ಹೀಗೆ ಶಾಂತಿದೂತ ಅರಬ್ಬರಿಗೆ ಹಿಂಸೆ ಆಗದಂತೆ, ಹುಜೂರ್ ಕೋರ್ಟಿನವರು ಏರ್ಪಾಡುಮಾಡಬೇಕು ’ ಅಂತ.

ಹುಡುಗನಿಗೆ ಐದು ರೂಪಾಯಿ ತಿರುಗಿ ಜುಲ್ಮಾನೆ ಹಾಕಿದರಂತೆ. ಚಿಕ್ಕವಯಸ್ಸಾದುದರಿಂದ ಕಠಿಣಶಿಕ್ಷೆ ಬೇಡ ಎಂದು ಹುಜೂರ್ ಕೋರ್ಟಿನಲ್ಲಿಂದರಂತೆ.

—ಜಿಜಿನಗರ್, ಬುಚ್ಚಿಬಾಬು.

ಶಂಖ ವಾದ್ಯ

(ಲೇಖಕರು : ಶ್ರೀಮಾನ್ ನಾ. ಕಸ್ತೂರಿ ಅವರು. ಪ್ರಕಾಶಕರು : ಉಷಾ ಸಾಹಿತ್ಯಮಾಲೆ ಮೈಸೂರು ; ಕ್ರಾ. ಅ. ೧೮೩ ; ಬೆಲೆ. ರೂ. ೧-೧೨-೧.)

ವಿಮರ್ಶೆ

'ಚಕ್ರದೃಷ್ಟಿ'ಯಿಂದ ಗುಂಡನ ಜೀವನವನ್ನು ಗುಂಡಾಯಣವನ್ನಾಗಿಸಿದ ಕಸ್ತೂರಿ ದೃಷ್ಟಿಯೇ ಇಲ್ಲಿ 'ಮಹೋಬ್ಲು'ವಿನ 'ಶಂಖವಾದ್ಯ'ವನ್ನೂದಿಸಿದೆ. ರಿಟೈರಾದಮೇಲೆ ಆಫೀಸರ ಅವತಾರ ಮುಗಿದಹಾಗೆಯೇ. ಅಧಿಕಾರವಿರುವತನಕ ಆಳುಕಾಳು ಅಟೆಂಡರು ಡ್ರೈವರುಗಳಮೇಲೆ, ಅಧಿಕಾರಿಗಳೂ ಅವರ ಹೆಂಡತಿಯರೂ ದರ್ಪ ನಡೆಸಬಹುದು. ಆಮೇಲೆ ಹೆಂಡತಿಯರ ದರ್ಪಕ್ಕೆ ಆಫೀಸರೇ ಗುರಿಯಾಳುಗಳಾಗಬೇಕು. ಹೀಗಾಯಿತು 'ಮಹೋಬ್ಲು'ವಿನ ಕಥೆ ಬೆಳಗ್ಗೆದ್ದರೆ ಕಾಗದದ ಮೇಲೆ ಪೆನ್ನಿಟ್ಟರೆ ಪಿನ್ನಿಡುವತನಕ ಬರೆದು ಬೆಂಡಾಗುತ್ತಿದ್ದ ಇವನಿಗೆ ಕಳೆಯಲಾಗದಷ್ಟು ಕಾಲವಿದೆ. ಕೋಲಿನೊಡನೆ ವಾಕಿಂಗಾಯಿತು. ಹೊಟ್ಟೆ ಇಳಿಯಲಿಲ್ಲ. ಆಸನಗಳ ಅಭ್ಯಾಸವೆಂದು ಗೋಡೆಗೊರಗಿ ತಲೆಕೆಳಕಾಗಿ ನಿಂತಾಯಿತು, ಹೊಟ್ಟೆ ಇಳಿಯುವುದು ಹಾಗಿರಲಿ, ಕಾಲೇ ಕೆಳಗಿಳಿಯಲಿಲ್ಲ. ಹೆಂಡತಿ ನಾದಿನಿ ಬಂದು ಅವರ ಕಾಲನ್ನು ಕೆಳಗೆ ತರಬೇಕಾಯಿತು. ಮನೆಯಲ್ಲಿ ಸರಸುವಿನೊಡನೆ ವಿರಸ. 'ಬಂಬು'ವಿನ ಒಳಸಂಚೇನೋ ಎಂದು ಸರಸುವಿಗೂ ಕೊಂಚ ಚಂಚಲ. ಹೀಗಾಗಿ ಮನೆ 'ಗೋಕುಲ'ವೆಂದು ಹೆಸರಿದ್ದರೂ ವ್ಯಾಕುಲವೇ ಆಯಿತು.

ಈ ಕಾದಂಬರಿಯಲ್ಲಿ ಚಕ್ರದೃಷ್ಟಿಯಂತೆಯೇ ಮತ್ತೊಂದು ಹೊಸ ಪ್ರಯೋಗ ನಡೆದಿದೆ. ಅಲ್ಲಿ ಅನೇಕಜನರಿಂದ ಒಬ್ಬನ ಜೀವನವು ನಿರೀಕ್ಷಿತವಾಗಿದ್ದರೆ ಇಲ್ಲಿ ಒಂದೇ ಸಂಸಾರದ ಕಥೆ ಅನೇಕ ಸ್ಥಳಗಳಿಂದ ವೀಕ್ಷಿತವಾಗಿದೆ. ಆದರೂ ಒಂದು ಸಮಷ್ಟಿದೃಷ್ಟಿ ಒದಗುವಂತೆ ಕಾಣುವ ಈ ಕಥನಕ್ರಮ ಕನ್ನಡಕ್ಕೆ ಹೊಸದು. ಚಕ್ರದೃಷ್ಟಿ'ಗಿಂತ ಇಲ್ಲಿಯ ಕ್ರಮ ಹೆಚ್ಚು ಪರಿಣಾಮಕಾರಿಯಾಗಿದೆ.

ಕಸ್ತೂರಿಗಳ ಹಾಸ್ಯದ ಸಾರಸರ್ವಸ್ವ ಅವರ ವಕ್ರದೃಷ್ಟಿಯಲ್ಲಿದೆ. ಪದ ಪದಾರ್ಥ ವಕ್ರೀಕರಣ, ಸನ್ನಿವೇಶಗಳನ್ನೂ ವ್ಯಕ್ತಿಗಳನ್ನು ವೀಕ್ಷಿಸುವ ವಕ್ರಕೋಣ, ಹಳೆಯದಕ್ಕೆ ನೂತನಾರ್ಥವನ್ನು ಕಲ್ಪಿಸುವ ವಕ್ರವಾದ ತೀಕ್ಷ್ಣತೆ, ಹಾಸ್ಯದ ಹಿಂದೆ ಹೊಸ ಜೀವನ ತತ್ವವನ್ನು ಪ್ರತಿಪಾದಿಸುವ ವಕ್ರಕ್ರಮ ಇವುಗಳಲ್ಲೆಲ್ಲಾ ಸುದರ್ಶನ ಚಕ್ರದಂತಹ ಸರ್ವವ್ಯಾಪಕತೆ, ಸರ್ವ ಮೋಹಕತೆಗಳು ತುಂಬಿವೆ. 'ಗಜದ್ಗುರು", 'ಹುಚ್ಚಾರಣೆ', 'ಕೊಳೀಬರ', 'ಸಿನಿಮಿಸು', 'ಶ್ವಾನಪ್ರಸ್ಥ', 'ಋಷೀಕೇಷ' ಮುಂತಾದ ನೂತನ ಪದರಚನೆಯಲ್ಲಿ, ಜಗಳವಾಡುವ ಕ್ರಮ

ಯಾವುದೆಂದು ನಿರ್ಧರಿಸುವ ಅತ್ತೆಸೊಸೆಯರ ಸಂವಾದದಲ್ಲಿ, ಕಾವಿ ಬಟ್ಟೆಯನ್ನು ಬಿಟ್ಟು ಬಿಳೀ ಬಟ್ಟೆಯನ್ನುಟ್ಟ ಕರೀಸ್ವಾಮಿ ರಾಮಯ್ಯಂಗಾರಿಯ ವ್ಯವಹಾರ ಕುಶಲತೆಯಲ್ಲಿ, ರಿಟೈರಾದವರಿಗೆಲ್ಲ ಸುಖಜೀವನವನ್ನು ಉಪದೇಶಿಸುವ ಬ್ರಹ್ಮಚಾರಿ ಜೀವನದ ಶೀನಪ್ಪನಲ್ಲಿ, ನಗುವಿನ ನಂದನವನವೇ ಸೃಷ್ಟಿತವಾಗಿರುವುದು ಕಂಡು ಬರುತ್ತದೆ. ಈ ಹಾಸ್ಯದ ಹಿಂದೆ ವಿದ್ಯಾಭ್ಯಾಸ, ಅಧಿಕಾರಿಗಳ ವರ್ತನೆ, ಹೆಂಗಸರ ಮನೋಭಾವ, ವೃತ್ತಪತ್ರಿಕೆಗಳ ರೀತಿನೀತಿಗಳು, ಸಂನ್ಯಾಸಿ ಜೀವನ, ಮುಂತಾದ ನೂರು ಸತ್ವಗಳು ಪರೀಕ್ಷಿತವಾಗಿವೆ. ಲೇಖಕರ ಅನುಕಂಪದಿಂದ ಕೂಡಿದ ವಿಡಂಬನದಲ್ಲಿ ಸರಳತೆಯಿದೆ. ಭಾಷಾಶೈಲಿಯಲ್ಲಿ ಹಳೆಯ ವಯ್ಯಾರವೇ ಹೊಸ ಒನಪಿನಿಂದ ಕೂಡಿ ಮನಮೋಹಕವಾಗಿದೆ. ಎರಡು ಗಂಟೆಯ ಓದು ಎರಡು ನಿಮಿಷದಂತೆ ಕಾಣುತ್ತದೆ.

ಜೀವನದ ನೂರು ಮುಖಗಳಿಗೆ, ಕಸ್ತೂರಿಯವರ ಬಳಿ ನೂರು ಕನ್ನಡಿಗಳಿವೆ. ಅವುಗಳಲ್ಲಿ ಕಾಣಬರುವ ಹಾಸ್ಯ ಮಯೂರ ನರ್ತನ, ಜೀವನದ ಕಷ್ಟ ಕಾರ್ಪಣ್ಯಗಳಿಗೆ, ಬದುಕಿನಬೇನೆ ಬೇಸರಗಳಿಗೆ ಧನ್ವಂತರೀ ಔಷಧಾಲಯ.

—ಜೀವಿ.

— o —



ಅರೆ ! ಎಲ್ಲಿ ಹೊರ್ಟೋದ್ರಲಾ ಇವರೆಲ್ಲಾ—ನನ್ನೊಬ್ಬನನ್ನೇ ಬುಟ್ಬುಟ್ಟು !